ಬೆಲೆ ರೂ.2.50
D.O.P - 15th of every month at Udupi Sorting Office

Smt. Nagaveni Ullas
Proprietor
Mobile : 9741626190
E-mail : rao.ullas@yahoo.co.in

RAMDEV ENTERPRISES
"Ramdev", Opp. Balaganapathi Temple, Padubidri-574111, Udupi Dist.
Authorised Distributor For :
1. KEYA-Amalgam Speciality Foods (I) Pvt. Ltd.
2. Swastiks-Vishnu Masala Food Pvt. Ltd.
3. Agarbathi, Loban & Camphor-Stockists

# ಶ್ರೀ ಶಾರದಾ

ಮಾಸಪತ್ರಿಕೆ – 15 ಏಪ್ರಿಲ್ 2015

॥ ಧಿಯೋ ಯೋನಃ ಪ್ರಚೋದಯಾತ್ ॥

Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಶಾರದಾನಗರ, ಕುಂಜಿಬೆಟ್ಟು, ಉಡುಪಿ – 576 102. ☎ 2520754

ಸಂಪುಟ–15 ಸಂಚಿಕೆ–4 ಪುಟಗಳು–8 Registered Under No.UDP/1260/2015-2017 Licenced to Post without Prepayment WPP No. SK/WPP/UDP/81/15-17

## ಕೋಟೆಕಾರಿನ ಶಂಕರ ಮಠದಲ್ಲಿ ಉಭಯ ಶ್ರೀಗಳಿಗೆ ಪೌರ ಸನ್ಮಾನ



**''ಧರ್ಮಕ್ಕೆ ಕಾಲ ದೋಷ ಎನ್ನುವುದಿಲ್ಲ. ಒಂದು ಕಾಲದಲ್ಲಿ ಧರ್ಮ ಇನ್ನೊಂದು ಕಾಲದಲ್ಲಿ ಅಧರ್ಮ ಎಂದಿಗೂ ಆಗುವುದಿಲ್ಲ. ಸತ್ಯವನ್ನು ಹೇಳುವುದೇ ಧರ್ಮವಾಗಿದ್ದು, ಧರ್ಮ ಮಾರ್ಗದಲ್ಲಿ ಸಾಗಿದವರಿಗೆ ಎಂದೂ ಚ್ಯುತಿ ಇಲ್ಲ'' ಎಂದು ಶೃಂಗೇರಿ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥಸ್ವಾಮೀಜಿ ನುಡಿದರು.**

ಶ್ರೀ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನ ದಕ್ಷಿಣಾಮ್ನಾಯ ಶ್ರೀ ಶೃಂಗೇರಿ ಶಾರದಾ ಪೀಠಾಧೀಶ್ವರ ಜಗದ್ಗುರು ಶ್ರೀ ಭಾರತೀತೀರ್ಥ ಸ್ವಾಮಿಗಳು ಹಾಗೂ ತತ್ಕರಕಮಲ ಸಂಜಾತರಾದ ಜಗದ್ಗುರು ಶ್ರೀ ವಿಧುಶೇಖರ ಭಾರತೀ ಸ್ವಾಮೀಜಿ ಅವರಿಗೆ ಕೋಟೆಕಾರು ಶೃಂಗೇರಿ ಶಂಕರ ಮಠದಲ್ಲಿ ಶನಿವಾರ ನಡೆದ ಗುರುವಂದನಾ ಕಾರ್ಯಕ್ರಮ ದಲ್ಲಿ ಅವರು ಮಾತನಾಡಿದರು.

''ನಮ್ಮ ಶಾಸ್ತ್ರಗಳ ಪ್ರಕಾರ ಪ್ರತಿಯೊಬ್ಬರಿಗೂ ಧರ್ಮ ಶ್ರದ್ಧೆ ಇರಬೇಕು. ಧರ್ಮ ಮಾರ್ಗವನ್ನು ಎಲ್ಲಿಯವರೆಗೆ ಅನುಸರಿಸುತ್ತೇವೋ ಅಲ್ಲಿವರೆಗೆ ಕ್ಷೇಮವಾಗಿರುತ್ತೇವೆ. ಯಾವಾಗ ಧರ್ಮ ಮಾರ್ಗದಿಂದ ಸರಿಯುತ್ತೇವೋ ಅದು ಎಲ್ಲ ಅನರ್ಥಗಳಿಗೆ ಕಾರಣವಾಗುತ್ತದೆ. ಧರ್ಮಕ್ಕೆ ಇರುವ ಮಹಿಮೆ ಅಪಾರವಾದುದು. ಧರ್ಮವನ್ನು ಅನುಸರಿಸುವವನ ಹೆಸರನ್ನು ಹೇಳಿದರೂ ಪುಣ್ಯ ಬರುತ್ತದೆ. ಅಧರ್ಮ ಮಾಡುವವನ ಹೆಸರೂ ಕೇಳಬಾರದು ಎನ್ನುವ ನಂಬಿಕೆ ಇದೆ. ಇದಕ್ಕೆ ಒಂದು ಉದಾಹರಣೆ ರಾಮನ ಹೆಸರನ್ನು ಎಲ್ಲರೂ ಇಟ್ಟುಕೊಳ್ಳುತ್ತಾರೆ; ಆದರೆ ರಾವಣನ ಹೆಸರನ್ನು ಹೇಳಲು ಇಚ್ಛಿಸುವುದಿಲ್ಲ, ಪ್ರತಿಯೊಬ್ಬರೂ ಧರ್ಮಶ್ರದ್ಧೆ ಅನುಸರಿಸಿಕೊಂಡು ಬರಬೇಕು'' ಎಂದು ಶ್ರೀಗಳು ತಿಳಿಸಿದರು.

### ಡಾ। ಹೆಗ್ಗಡೆಯವರ ಮಾತು

ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಪದ್ಮವಿಭೂಷಣ ಡಾ। ಡಿ. ವೀರೇಂದ್ರ ಹೆಗ್ಗಡೆ ಉಭಯ ಸದ್ಗುರುಗಳಿಗೆ ಅಭಿವಂದನೆ ಸಲ್ಲಿಸಿ ಶಿಷ್ಯರ ಮೇಲಿನ ವಾತ್ಸಲ್ಯ, ಗುರುಭಕ್ತಿಯನ್ನು ಶೃಂಗೇರಿ ಮಠದಲ್ಲಿ ಮಾತ್ರ ಕಾಣಲು ಸಾಧ್ಯವಿದ್ದು ಈ ಪರಂಪರೆ ಕಳೆದ 200 ವರುಷಗಳಿಂದ ನಡೆದುಕೊಂಡು ಬಂದಿದೆ ಎಂದರು.

ಶೃಂಗೇರಿ ಮಠಕ್ಕೆ ಪ್ರಭಾವಿ ವ್ಯಕ್ತಿಗಳು ಭೇಟಿ ನೀಡುತ್ತಿದ್ದರೂ ವಾಸ್ತವವಾಗಿ ಮಠ ಶ್ರೀ ಸಾಮಾನ್ಯನ ಜತೆಗಿದೆ. ಪ್ರಾಣಿ, ಪಕ್ಷಿಗಳನ್ನು ಅಪಾರವಾಗಿ ಪ್ರೀತಿಸುತ್ತಿದ್ದು ಅಂತಹ ಪ್ರೀತಿ ಮಕ್ಕಳಿಂದ ಹೆತ್ತವರಿಗೂ ಸಿಗಲು ಸಾಧ್ಯವಿಲ್ಲ. 30 ವರ್ಷಗಳ ಹಿಂದೆ ಶ್ರೀಗಳು ನಿರಂತರ ಆರು ವರ್ಷಗಳವರೆಗೆ ಧರ್ಮ ಪ್ರಚಾರಾರ್ಥ ಪ್ರವಾಸಕ್ಕೆ ತೆರಳುತ್ತಿದ್ದ ಸಂದರ್ಭ ಜನಸಾಮಾನ್ಯನ ಜತೆಗಿದ್ದು ಗ್ರಾಮೀಣ ಭಾಗದಲ್ಲಿ ಸಣ್ಣ ಕುಟೀರದಲ್ಲಿ ನೆಲೆಸುತ್ತಿದ್ದರು. ಧರ್ಮಸ್ಥಳಕ್ಕೆ ಬಂದಾಗ ಚಳಿಯಿದ್ದರೆ ಕೋಟೆಕಾರಿಗೆ ಬಂದು

(3ನೇ ಪುಟಕ್ಕೆ...)

## 10ನೇ ತರಗತಿಯ ವಿಶೇಷ ಪರೀಕ್ಷಾಪೂರ್ವತಯಾರಿ ಶಿಬಿರ



ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಕುಂಜಿಬೆಟ್ಟು, ಉಡುಪಿ ಇವರ ವತಿಯಿಂದ 10ನೇ ತರಗತಿಯ ವಿದ್ಯಾರ್ಥಿಗಳಿಗೆ ವಿಶೇಷ ಪರೀಕ್ಷಾಪೂರ್ವ ತಯಾರಿ ಶಿಬಿರವು ಸಂಘದ ಶಿಕ್ಷಣ ತರಬೇತಿ ವೇದಿಕೆಯ ಮೂಲಕ ತಾ.15–03–2015ರಂದು ಶಾರದಾ ಮಂಟಪದಲ್ಲಿಜರುಗಿತು.

**ಉದ್ಘಾಟನಾ ಸಮಾರಂಭ :**


"ಬದಲಾಗಿರುವ ಪಠ್ಯ ವಿಷಯ ಹಾಗೂ ಹೊಸ ಮಾದರಿಯ ಪರೀಕ್ಷಾ ಪದ್ಧತಿಯ ಸಂದರ್ಭದಲ್ಲಿ 10ನೇ ತರಗತಿಯ ವಿದ್ಯಾರ್ಥಿಗಳಿಗೆ ವಿಶೇಷ ಶಿಬಿರವನ್ನು ಆಯೋಜಿಸಿ ಸಂಘಟಿಸಿರುವುದು ನಮ್ಮ ಸಮಾಜದ ವಿದ್ಯಾರ್ಥಿಗಳ ಭವಿಷ್ಯಕ್ಕೆ ತುಂಬಾ ಸಹಕಾರಿಯಾಗಿದೆ" ಎಂದು ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಕುಂಜಿಬೆಟ್ಟು, ಉಡುಪಿ ಇದರ ಮಾಜಿ ಕಾರ್ಯದರ್ಶಿ ಹಾಗೂ ಮಣಿಪಾಲ ಪ.ಪೂ.ಕಾಲೇಜಿನ ನಿವೃತ್ತ ಉಪಪ್ರಾಂಶುಪಾಲರಾದ ಹೆರ್ಗ ನಿರಂಜನ್ ರಾವ್ ಇವರು ಶಿಬಿರವನ್ನು ದೀಪ ಬೆಳಗಿಸಿ ಉದ್ಘಾಟಿಸಿ ನುಡಿದರು.

ಸಮಾರಂಭದಲ್ಲಿ ತರಬೇತಿಯ ಹಿರಿಯ ಸಂಪನ್ಮೂಲ ವ್ಯಕ್ತಿ ಕಾಪು ಶ್ರೀನಿವಾಸ ರಾವ್, ಸಂಘದ ಕಾರ್ಯದರ್ಶಿ ಅರವಿಂದ ಕುಮಾರ್, ಖಜಾಂಚಿ ಬಿ.ಕೃಷ್ಣಮೂರ್ತಿ ರಾವ್, ಶಿಕ್ಷಣ ತರಬೇತಿ ವೇದಿಕೆಯ ಅಧ್ಯಕ್ಷರಾದ ಡಾ। ವೈ.ರವೀಂದ್ರನಾಥ್‌ರಾವ್, ವೇದಿಕೆಯಸದಸ್ಯರಾದ ಶ್ರೀಮತಿ ನಿವೇದಿತಾ ಇವರು ಉಪಸ್ಥಿತರಿದ್ದರು.

### ಪಾಲಕರ ಹಾಗೂ ಶಿಬಿರಾರ್ಥಿಗಳ ಪ್ರಶಂಸೆ

ಕಾರ್ಯಕ್ರಮದ ಅಧ್ಯಕ್ಷರಾದ ಡಾ। ವೈ. ರವೀಂದ್ರನಾಥ್ ರಾವ್ ತಮ್ಮ ಅಧ್ಯಕ್ಷೀಯ ಮಾತುಗಳೊಂದಿಗೆ ಪರೀಕ್ಷಾ ತಯಾರಿ ಹಾಗೂ ಪರೀಕ್ಷಾ ಮುನ್ನೆಚ್ಚರಿಗಳ ಬಗ್ಗೆ ಉದಾಹರಣೆಗಳೊಂದಿಗೆ ತಿಳಿಸಿದರು. ಶಿಬಿರಾರ್ಥಿ ಕುಮಾರಿ ಸುದೇಷ್ಣಾ ಪರ್ಕಳ ಪ್ರಾರ್ಥಿಸಿದರು. ಸಂಘದ ಕಾರ್ಯದರ್ಶಿ ಶ್ರೀ ಅರವಿಂದಕುಮಾರ್ ಸ್ವಾಗತಿಸಿದರು. ಸಂಘದ ಜತೆ ಕಾರ್ಯದರ್ಶಿ ಮಟ್ಟು ಕೃಷ್ಣಕುಮಾರ್‌ರಾವ್ ಉದ್ಘಾಟನಾ ಸಮಾರಂಭವನ್ನು ಸಂಯೋಜಿಸಿ ಹೃದಯಸ್ಪರ್ಶಿ ಮಾತುಗಳೊಂದಿಗೆ ಕಾರ್ಯಕ್ರಮ ನಿರ್ವಹಿಸಿದರು. ಪ್ರಭಾಕರ ಭಂಡಿ ಧನ್ಯವಾದ ಸಮರ್ಪಿಸಿದರು.

(4ನೇ ಪುಟಕ್ಕೆ...)



**ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ)**

ಶ್ರೀಶಾರದಾನಗರ, ಕುಂಜಿಬೆಟ್ಟು, ಉಡುಪಿ – 2.

ನಮ್ಮ ಸಂಘದ ಆಶ್ರಯದಲ್ಲಿ

**ಶ್ರೀ ಶಂಕರ ಜಯಂತಿ ಆಚರಣೆಯು**

ಕುಂಜಿಬೆಟ್ಟು ಶ್ರೀಶಾರದಾ ದೇವಸ್ಥಾನದಲ್ಲಿ

ತಾ.23–04–2015 ಗುರುವಾರ ನೆರವೇರಲಿದೆ.

ಆ ಪ್ರಯುಕ್ತ ಅದೇ ದಿನ ಬೆಳಿಗ್ಗೆ **ಸಾಮೂಹಿಕ ಉಪನಯನ**ವು ನಡೆಯಲಿದೆ.

ಸರ್ವರಿಗೂ ಆದರದ ಸ್ವಾಗತ : – ಕಾರ್ಯದರ್ಶಿ

ಸಾಮೂಹಿಕ ಉಪನಯನದಲ್ಲಿ ಪಾಲ್ಗೊಳ್ಳಲಿರುವ ಆಸಕ್ತ ಸಮಾಜ ಬಾಂಧವರು ವಟುಗಳ ವಿವರಗಳನ್ನು ತಾ.20–04–2015ರ ಒಳಗೆ ಶ್ರೀಶಾರದಾ ಮಂಟಪದ ಮೆನೇಜರ್/ಕಾರ್ಯದರ್ಶಿಯವರಿಗೆ ತಿಳಿಸಲು ವಿನಂತಿಸಲಾಗಿದೆ.

ಸಂಪಾದಕೀಯ ಲೇಖನ....

# ರಾಜ್ಯ ಸರಕಾರದ ಜಾತಿಗಣತಿ-ಮಾಹಿತಿ

**ಕಳೆದ ತಿಂಗಳ "ಶ್ರೀ ಶಾರದಾ" ಪತ್ರಿಕೆಯಲ್ಲಿ ಸರಕಾರದ ಜಾತಿ ಗಣತಿ ಬಗ್ಗೆ ನೀಡಿದ ಮಾಹಿತಿಯಂತೆ ಸಮಾಜ ಬಾಂಧವರು ಗಣತಿದಾರರಿಗೆ ಕೆಳಗಿನ ಕಾಲಂಗಳಂತೆ ಮಾಹಿತಿ ನೀಡುವುದು ಮುಖ್ಯವಾಗಿರುತ್ತದೆ.**


**ಸಂಪಾದಕ ಮಂಡಳಿ**

ಕೃಷ್ಣಕುಮಾರ್ ರಾವ್, ಮಟ್ಟು
ಕೆ. ವೇಣುಗೋಪಾಲ್ ರಾವ್
ಡಾ। ವೈ. ಸುದರ್ಶನ ರಾವ್
ಟಿ. ಸುರೇಶ್ ರಾವ್, ನಿಟ್ಟೂರು
ಟಿ. ವಿಶ್ವನಾಥ ಶಾನುಭಾಗ್, ವಿ.ಪಿ.ನಗರ
ಪ್ರಕಾಶ್ ರಾವ್ ಕೋಲ್ಪೆ, ಮಣಿಪಾಲ

ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನ ಹಾಗೂ ವೈಯಕ್ತಿಕ ಜಾಹೀರಾತುಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು, ಅನಿಸಿಕೆಗಳು ಲೇಖಕರ ಹಾಗೂ ಜಾಹೀರಾತುದಾರರ ಸ್ವಂತ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ ಅಥವಾ ಪ್ರಕಾಶಕರ ಅಭಿಪ್ರಾಯ ವಾಗಿರಬೇಕಾಗಿಲ್ಲ. ಲೇಖನಗಳನ್ನು, ಸುದ್ದಿಗಳನ್ನು ಮತ್ತು ಜಾಹೀರಾತುಗಳನ್ನು ಪತ್ರಿಕೆಯ ಮೂಲ ಚಿಂತನೆಗೆ ಅನುಗುಣವಾಗಿ ಸೂಕ್ತ ಮಾರ್ಪಾಡು ಮಾಡಿಕೊಳ್ಳುವ ಅಧಿಕಾರ ಸಂಪಾದಕ ಮಂಡಳಿಗಿದೆ. -ಸಂಪಾದಕ ಮಂಡಳಿ


## ಸ್ಥಾನಿಕ ಬಂಧುಗಳೇ-ನೀವು ನೀಡುವ ಮಾಹಿತಿ ಸ್ಪಷ್ಟವಾಗಿ ಹೀಗಿರಬೇಕು.

**ಕುಟುಂಬದ ಅನುಸೂಚಿ ನಮೂನೆ -3ರ ಕಾಲಂ ಸಂಖ್ಯೆ 6-ಜಾತಿ(Cast), ಕಾಲಂಸಂಖ್ಯೆ 7-ಉಪಜಾತಿ(Sub Caste ), ಕಾಲಂ ಸಂಖ್ಯೆ 8 ಜಾತಿಗೆ ಇರುವ ಇನ್ನಿತರ ಪರ್ಯಾಯ ಹೆಸರುಗಳು(ಗರಿಷ್ಠ-3) (Other synonymous names by which the Caste is known) (Max -3) ಎಂದು ಇದೆ. ಈ ಕಾಲಂಗಳಲ್ಲಿ - 6ರಲ್ಲಿ "ಸ್ಥಾನಿಕ ಬ್ರಾಹ್ಮಣ" ಎಂದೂ, 7ರಲ್ಲಿ / X (ನಮೂದು ಇಲ್ಲ ಎಂದು ಅರ್ಥ)ಎಂದೂ, 8ರಲ್ಲಿ "ಸ್ಥಾನಿಕ" ಎಂದೂ ನಮೂದಿಸಬೇಕು.**

**ನಮ್ಮ ಸ್ಥಾನಿಕ ಬ್ರಾಹ್ಮಣ ಸಮಾಜದ ಮುಂದಿನ ಜನಾಂಗದ ಉಳಿಕೆಗೆ, ಒಳಿತಿಗೆ, ಪ್ರಗತಿಗೆ ಹೀಗೆ ನಮೂದಿಸುವುದು ಅತ್ಯಗತ್ಯವೆಂದು ನಿರ್ಧರಿಸಲಾಗಿದೆ. ಈ ಬಗ್ಗೆ ಸ್ಥಾನಿಕ ಬ್ರಾಹ್ಮಣ ಮಹಾಮಂಡಲದ ಪದಾಧಿಕಾರಿಗಳು, ನಮ್ಮ ಸ್ಥಾನಿಕ ಸಮಾಜದ ವಿವಿಧ ಸಂಘಟನೆಗಳ ಮುಖಂಡರು ಮತ್ತು ಗಣ್ಯರಲ್ಲಿ ಚರ್ಚಿಸಿ ಈ ರೀತಿಯ ತೀರ್ಮಾನಕ್ಕೆ ಬರಲಾಗಿದೆ.(ಬೇರೆ ಇತರ ಅಭಿಪ್ರಾಯಗಳಿದ್ದರೂ ಸಮಾಜ ಬಾಂಧವರು ತಿಳಿಸಬಹುದು.) ಆದ್ದರಿಂದ ಈ ಮಾಹಿತಿಯನ್ನು ಸ್ಥಾನಿಕ ಬ್ರಾಹ್ಮಣ ಸಮಾಜದ ಪ್ರತಿಯೊಬ್ಬರೂ ತಿಳಿದುಕೊಂಡು ಈ 6-7-8 ಕಾಲಂ ಗಳಲ್ಲಿ ಈ ಕೆಳಗಿನಂತೆ ನಮೂದಿಸುವುದು.**

| ಕಾಲಂ ಸಂಖ್ಯೆ 6 | ಕಾಲಂ ಸಂಖ್ಯೆ 7 | ಕಾಲಂ ಸಂಖ್ಯೆ 8 ಕಳೆದ ತಿಂಗಳು ಕಲಂ ಸಂಖ್ಯೆ 7 ಎಂದು ತಪ್ಪಾಗಿ ಮುದ್ರಿತವಾಗಿತ್ತು | | |
|---|---|---|---|---|
| A 1177 | X | A 1176 | X | X |

**(ಈ ಸಂಕೇತಗಳನ್ನು ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದಿಂದ ಕೈಗೊಳ್ಳಲಾಗುವ "ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ-2015" ಉದ್ದೇಶಕ್ಕಾಗಿ ಕರ್ನಾಟಕ ರಾಜ್ಯದಲ್ಲಿ ಗುರುತಿಸಿರುವ ಜಾತಿ-ಉಪಜಾತಿಗಳ ಪಟ್ಟಿಯಲ್ಲಿ ಪ್ರಕಟಿಸಿದಂತೆ ಬರೆಯಬೇಕಾಗಿದೆ. (ಎಲ್ಲಾ ಜಾತಿಗಳಿಗೂ ಒಂದೊಂದು ಸಂಕೇತ ನೀಡಲಾಗಿದೆ.) (ಸ್ಥಾನಿಕ-A 1176 ಮತ್ತು ಸ್ಥಾನಿಕ ಬ್ರಾಹ್ಮಣ-A 1177 ಸಂಕೇತ ನೀಡಿರುತ್ತಾರೆ.**

**ಗಣತಿದಾರರು ನಿಮ್ಮ ಮನೆಗೆ ಬಂದಾಗ ಶ್ರೀ ಶಾರದಾ ಪತ್ರಿಕೆಯಲ್ಲಿರುವ ಈ ಸಂಕೇತಗಳನ್ನೇ ಗಣತಿದಾರರಿಗೆ ತೋರಿಸುವಂತೆ ವಿನಂತಿಸಿಕೊಳ್ಳಲಾಗಿದೆ.**

ಆದಾಗ್ಯೂ ನಮ್ಮ ಸಮಾಜದ ಹಲವು ಮಂದಿ ತಿಳಿದವರು "**ಸ್ಥಾನಿಕ ಬ್ರಾಹಣ-A 1176**" ಎಂದು ನೀಡಿದರೆ ಮುಂದೆ ನಮಗೆ ಯಾವ ಮೀಸಲಾತಿಯೂ ದೊರಕುವುದಿಲ್ಲ. ಎಂಬ ಮಾತನ್ನು ಅಲ್ಲಲ್ಲಿ ಮಾತನಾಡಿಕೊಂಡಿರುವುದು ನಮಗೆ ತಿಳಿದಿದೆ. ಈ ಬಗ್ಗೆ ಹಲವರು ನಮ್ಮಲ್ಲಿ ವೈಯಕ್ತಿಕವಾಗಿ ಹಾಗೂ ದೂರವಾಣಿ ಮೂಲಕ ತಮ್ಮ ಅಭಿಪ್ರಾಯಗಳನ್ನು ತಿಳಿಸಿದ್ದಾರೆ. ಆದರೆ ನಮ್ಮ ಗಮನಕ್ಕೆ ಬಂದಂತೆ ಈಗ ನಡೆಯುವ ಜಾತಿ ಗಣತಿಯು 1931ರ ಜಾತಿಗಣತಿಯ ಆಧಾರದಂತೆ ಸರಕಾರದ ಕೈಯಲ್ಲಿರುವ ಜಾತಿ ಪಟ್ಟಿಯನ್ನು ಪರಿಷ್ಕರಿಸುವ ಸಲುವಾಗಿ ಎಂಬುದು ಸ್ಪಷ್ಟ.

### ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ ಬೆಂಗಳೂರು ಇವರು 2015ರ ಜಾತಿ ಸಮೀಕ್ಷೆಗಾಗಿ ಪ್ರಕಟಿಸಿದ ಸಮೀಕ್ಷಾ ಮಾಹಿತಿ ಕೈಪಿಡಿಯ ಪುಟ ಸಂಖ್ಯೆ 2ರಲ್ಲಿರುವಂತೆ - 1.1 ಸಮೀಕ್ಷೆಯ ಉದ್ದೇಶ :

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ಜಾತಿಗಳು ಹಾಗೂ ಇತರ ಜಾತಿಗಳನ್ನೊಳಗೊಂಡಂತೆ ರಾಜ್ಯದ ಪ್ರತಿಯೊಂದು ಕುಟುಂಬದ ಸಮಗ್ರ ಸಮೀಕ್ಷೆಯನ್ನು ಕೈಗೊಂಡು ವಿವಿಧ ಜಾತಿಗಳ ಸಾಮಾಜಿಕ ಶೈಕ್ಷಣಿಕ ಮತ್ತು ಆರ್ಥಿಕ ಸ್ಥಿತಿಗತಿಗಳ ಬಗ್ಗೆ ವಿಶ್ಲೇಷಣೆ ಮಾಡಿ, ಹಿಂದುಳಿದ ವರ್ಗಗಳ ಪಟ್ಟಿಯನ್ನು ಪರಿಷ್ಕರಿಸುವ ಕುರಿತು ಸರ್ಕಾರಕ್ಕೆ ಶಿಫಾರಸ್ಸು ಮಾಡುವ ಜವಾಬ್ದಾರಿಯನ್ನು ಆಯೋಗ ಹೊಂದಿರುತ್ತದೆ. ಈಗ ಕೈಗೊಳ್ಳುತ್ತಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ಉದ್ದೇಶಗಳು ಕೆಳಕಂಡಂತಿವೆ.

ಅ) ರಾಜ್ಯದ ಎಲ್ಲ ವರ್ಗಗಳ/ಜಾತಿಗಳ ಸಾಮಾಜಿಕ, ಶೈಕ್ಷಣಿಕ ಮತ್ತು ಔದ್ಯೋಗಿಕ ಸ್ಥಿತಿಗತಿಗಳ ಕುರಿತು ಸಮೀಕ್ಷೆ ಮುಖಾಂತರ ಸಮಗ್ರ ಅಂಕಿ ಅಂಶಗಳನ್ನು ಸಂಗ್ರಹಿಸುವುದು.

ಆ) ಸಮೀಕ್ಷೆಯಲ್ಲಿ ಅನುಸರಿಸಿದ ವಿವಿಧ ಮಾನದಂಡಗಳ ಆಧಾರದ ಮೇಲೆ ಸಂಗ್ರಹಿಸಿದ ಅಂಕಿ-ಅಂಶಗಳ ಹಿನ್ನೆಲೆಯಲ್ಲಿ ಹಿಂದುಳಿದ ವರ್ಗಗಳನ್ನು ಗುರುತಿಸಿ ಅವರ ಸರ್ವತೋಮುಖ ಅಭಿವೃದ್ಧಿಗಾಗಿ ಪೂರಕವಾಗುವ ಕಾರ್ಯಕ್ರಮಗಳನ್ನು ರೂಪಿಸುವುದು.

### ಆದ್ದರಿಂದ ಈ ಸಮೀಕ್ಷಾ ಕಾರ್ಯವು ಈಗಿರುವ ಪಟ್ಟಿಯನ್ನು ಸಮಗ್ರ ಪರಿಷ್ಕರಿಸುವ ಸಲುವಾಗಿ ನೆರವೇರುತ್ತಿದೆ ಎಂಬುದು ಸತ್ಯ.

ಈ ಸಮಯದಲ್ಲಿ ನಮ್ಮ ಸಮಾಜದ ಸಂಘಟನೆಗಳ ಜವಾಬ್ದಾರಿಯೂ ಬಹಳಷ್ಟು ಇದೆ. ಸಮಾಜ ಬಾಂಧವರು ಮೇಲಿನಂತೆ "ಸ್ಥಾನಿಕ ಬ್ರಾಹ್ಮಣ" ಎಂದು ಮಾಹಿತಿ ನೀಡಿದ ಮೇಲೆ ನಮ್ಮ ಸಮಾಜಕ್ಕೆ ಯಾವ ರೀತಿಯ ಮೀಸಲಾತಿಬೇಕೆಂದು ಆಯೋಗಕ್ಕೆ-ಸರಕಾರಕ್ಕೆ ಶಿಫಾರಸ್ಸು ಪತ್ರಗಳನ್ನು ಬರೆಯಬೇಕು. ಸಮಾಜ ಬಾಂಧವರು ವೈಯಕ್ತಿಕ ಪತ್ರಗಳನ್ನೂ ಬರೆಯಬಹುದು. ನಮ್ಮ ರಾಜ್ಯಾದ್ಯಂತ ಮತ್ತು ರಾಜ್ಯದಿಂದ ಹೊರಗೆ ಇರುವ ನಮ್ಮ ಎಲ್ಲಾ ಸಾಮಾಜಿಕ ಸಂಘಟನೆಗಳೂ ಸ್ಥಾನಿಕ ಬ್ರಾಹ್ಮಣ ಸಮಾಜಕ್ಕೆ ಮೊದಲಿನಂತೆಯೇ ಮೀಸಲಾತಿ ಸೌಲಭ್ಯ ಒದಗಿಸಿಕೊಡಬೇಕೆಂದು ಮನವಿ ಪತ್ರ ಸಲ್ಲಿಸಬೇಕು. ಅಲ್ಲದೆ ಸಂಘಟನೆಗಳ ಪ್ರಮುಖರು, ಇತರ ಗಣ್ಯರು, ಸರಕಾರ ಹಾಗೂ ಸರಕಾರದ ವ್ಯಕ್ತಿಗಳ ಮತ್ತು ಆಯೋಗದ ಮೇಲೆ ಒತ್ತಡ ಹೇರಬೇಕು.

ನಮ್ಮ ಕೇಂದ್ರ ಹಾಗೂ ರಾಜ್ಯ ಸರಕಾರದ ವಿವಿಧ ಇಲಾಖೆಗಳಲ್ಲಿ (ಮುಖ್ಯವಾಗಿ ರೆವಿನ್ಯೂ, ಶಿಕ್ಷಣ, ಆರೋಗ್ಯ ಮೊದಲಾದ ಇಲಾಖೆಗಳಲ್ಲಿ ಮತ್ತು ಸರಕಾರಿ ಸಾಮ್ಯದ ಬೇಂಕುಗಳಲ್ಲಿ ಹಾಗೂ ಇತರ ಖಾಸಗೀ ಉದ್ಯಮ ರಂಗಗಳಲ್ಲಿಯೂ) ನಮ್ಮ ಸ್ಥಾನಿಕ ಬಂಧುಗಳು ಪ್ರಮುಖ ಹುದ್ದೆಗಳಲ್ಲಿದ್ದು, ಅವರು ನಮ್ಮ ಸಾಮಾಜಿಕ ಸಂಘಟನೆಗಳಿಗೆ ಯೋಗ್ಯ ಮಾಹಿತಿ ನೀಡುವುದಲ್ಲದೆ, ಈ ಆಯೋಗದ ಮೇಲೆ ಅವರ ವೈಯಕ್ತಿಕ ಪ್ರಭಾವ ಬೀರುವ ಅಗತ್ಯವೂ ಇದೆ. ಈ ಹಿಂದೆ ನಮ್ಮ ಸಮಾಜವನ್ನು ಹಿಂದುಳಿದ ವರ್ಗಕ್ಕೆ ಸೇರಿಸುವಲ್ಲಿ ನಮ್ಮ ಸಮಾಜದಲ್ಲಿ ಆಗಿ ಹೋದ ಗಣ್ಯರು ಸರಕಾರದ ಮೇಲೆ ಒತ್ತಡ ಹೇರಿದ್ದರ ಪರಿಣಾಮದಿಂದಲೇ ಈ ಮೀಸಲಾತಿಯ ಪ್ರಯೋಜನ ಸಿಕ್ಕಿರುವುದೆನ್ನುವ ಮಾತೂ ಅಲ್ಲಿ ಇಲ್ಲಿ ಮಾತನಾಡಿಕೊಂಡಿರುವುದನ್ನು ಕೇಳಿರುತ್ತೇವೆ.

ಆದ್ದರಿಂದ ನಮ್ಮ ಸಮಾಜದ ಎಲ್ಲಾ ಸಣ್ಣ-ದೊಡ್ಡ ಸಂಘಟನೆಗಳಿಗೆ ಮತ್ತು ಸ್ಥಾನಿಕ ಬ್ರಾಹ್ಮಣ ಮಹಾಮಂಡಲಕ್ಕೆ ಈ ಬಗ್ಗೆ ಬಹುತರವಾದ ಜವಾಬ್ದಾರಿಯೂ ಇದೆ. ಈ ಸಂದರ್ಭದಲ್ಲಿ ಎಲ್ಲರೂ ಒಗ್ಗಟ್ಟಿನಿಂದ ಕಾರ್ಯಪ್ರವೃತ್ತರಾಗಿ ನಮ್ಮ ಸ್ಥಾನಿಕ ಬ್ರಾಹ್ಮಣ ಸಮಾಜವೂ ಪಡೆಯುವ ಎಲ್ಲಾ ಸರಕಾರಿ ಸೌಲಭ್ಯಗಳಿಂದ ವಂಚಿತರಾಗದಂತೆ ನೋಡಿಕೊಳ್ಳಬೇಕಾದುದು ಬಹಳ ಪ್ರಾಮುಖ್ಯ. **ಈ ಬಗ್ಗೆ ಇತರ ಅಭಿಪ್ರಾಯಗಳಿದ್ದರೂ ಸಮಾಜ ಬಾಂಧವರು ಶ್ರೀಶಾರದಾ ಪತ್ರಿಕೆಗೆ ತಿಳಿಸಬಹುದು.**

**ಸಮಾಜ ಬಾಂಧವರು ಪತ್ರ ತಲುಪಿಸಬೇಕಾದ ವಿಳಾಸ : ಅಧ್ಯಕ್ಷರು, ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ, ನ.16-ಡಿ, ಡಿ. ದೇವರಾಜ ಅರಸು ಭವನ, 2ನೇ ಮಹಡಿ, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತ ನಗರ, ಬೆಂಗಳೂರು-560052. ಇ-ಮೈಲ್ : kscbcb@gmail.com**


**ಶ್ರೀಶಾರದಾ ವೇದಿಕೆಯ ಮಹಾ ಪೋಷಕರು :** ದಿ। ಅಂಬಲಪಾಡಿ ಕೃಷ್ಣ ರಾವ್, ಡಾ। ಪಿ. ವಿಠಲ ರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ದಿ। ಕುಂಜಾರು ವಿಠಲ ರಾವ್ ಮುಂಬೈ, ಶ್ಯಾಮರಾವ್ ಅಲೆವೂರು, ವೈ. ಮುರಳೀಕೃಷ್ಣ ರಾವ್ ಉಡುಪಿ, ಸಿ. ಸರ್ವೋತ್ತಮ ರಾವ್ ಚಿಟ್ಪಾಡಿ, ಎಂ. ಸದಾನಂದ ರಾವ್ ಚಿಟ್ಪಾಡಿ, ದಿ। ಡಾ। ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ, ಬಿ. ಎಂ.ಸಂಜೀವ ರಾವ್ ಮಂಗಳೂರು, ಎನ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್‌ರಾವ್ ಮಂಗಳೂರು, ಪಿ. ಆರ್. ಸದಾಶಿವ ರಾವ್ ಬೆಂಗಳೂರು, ಬೆಳ್ಮಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಸತಾರ, ಎ. ಕೃಷ್ಣಮೂರ್ತಿ ರಾವ್ ಆಳುಗೇಲು, ಶ್ರೀಮತಿ ಸರೋಜಿನಿ ದೇವರಾವ್ ನಂದಿಕೂರು, ಡಾ। ಪರೀಕ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ, ಕೆ. ವೇಣುಗೋಪಾಲರಾವ್ ಅಂಬಲ್ಪಾಡಿ, ಬಿ. ಕೃಷ್ಣಮೂರ್ತಿರಾವ್ ಅಂಬಲ್ಪಾಡಿ, ಶ್ರೀಮತಿ ವಿಜಯಾ ಆರ್.ರಾವ್ ಮುಂಬಯಿ, ಪ್ರೊ। ತಂತ್ರಾಡಿ ನಾರಾಯಣ ಶ್ಯಾನುಭಾಗ್, ಶ್ರೀಮತಿ ಮಾಲತಿ ಶಿವರಾವ್ ಮಣಿಪಾಲ, ವೈ. ಶಂಕರನಾರಾಯಣರಾವ್ ಪಡುಬಿದ್ರಿ, ವೈ. ಮೋಹನ ರಾವ್ ಅಂಬಲಪಾಡಿ, ಬೆಳ್ಳೆ ಶ್ರೀನಿವಾಸ ರಾವ್ ಮುಂಬೈ, ಡಾ। ವೈ. ಸುದರ್ಶನ ರಾವ್ ಕುಕ್ಕಿಕಟ್ಟೆ, ಕಟ್ಟೆ ವೆಂಕಟ್ರಾವ್ ಪಲಿಮಾರು, ಮಟ್ಟು ದಿವಾಕರ ರಾವ್ ಮುಂಬಯಿ, ಕೆ.ಉಮೇಶ್ ರಾವ್ ಕುಡಾಲ್, ಕೆ.ವೆಂಕಟರಮಣರಾವ್ ಕುಡಾಲ್, ಕಡಂದಲೆ ಶ್ರೀಪತಿ ರಾವ್ ಅಧಿಕಾರಿ ಮುಂಬೈ, ಅಂಬಲ್ಪಾಡಿ ರಾಘವೇಂದ್ರ ರಾವ್ ಬೆಂಗಳೂರು, ಅದ್ಯಪಾಡಿ ವಸಂತ ಕುಮಾರ್, ಎಸ್.ಉಮೇಶ್ ರಾವ್ ಮಾಣಿಬೆಟ್ಟು, ಶ್ರೀಮತಿ ಸವಿತಾ ಮೋಹನ್‌ರಾವ್ ಕಬ್ಯಾಡಿ, ಪ್ರಫುಲ್ಲಚಂದ್ರರಾವ್ ಉಡುಪಿ, ಕೃಷ್ಣಕುಮಾರ್‌ರಾವ್ ಮಟ್ಟು, ಚಿಟ್ಪಾಡಿ ಭುಜಂಗರಾವ್, ಕೋಲ್ಪೆ ಗೋಪಾಲಕೃಷ್ಣ ರಾವ್, ಯು.ಅರವಿಂದ ಕುಮಾರ್ ಮಣಿಪಾಲ, ಕಿಶೋರ್ ಭಾಸ್ಕರ್ ರಾವ್ ಮುಂಬಯಿ, ವೈ.ವಿಠಲರಾವ್ ಚಿಟ್ಪಾಡಿ, ಶ್ರೀ ಪ್ರವೀಣ್ ಕುಮಾರ್ ಬೆಳ್ಳೆ.

■...1ನೇ ಪುಟದಿಂದ **ಕೋಟೆಕಾರಿನ ಶಂಕರ ಮಠದಲ್ಲಿ ಉಭಯ ಶ್ರೀಗಳಿಗೆ ಪೌರ ಸನ್ಮಾನ**

ತಂಗುತ್ತಿದ್ದರು. ಹಿಂದಿನಿಂದಲೇ ಅವರು ಶಾಂತಮೂರ್ತಿ, ಪ್ರಕೃತಿ ಪ್ರಿಯರು ಎಂದು ವಿಶ್ಲೇಷಿಸಿದರು.

**ಕಿರಿಯ ಯತಿಗಳಿಂದ ಅನುಗ್ರಹ ಭಾಷಣ**

''ಭಗವಂತನ ಬಗ್ಗೆ ತಪ್ಪು ಕಲ್ಪನೆ ಸೃಷ್ಟಿಸಿದರೂ ದೇವರ ಅಸ್ತಿತ್ವ ಅಲ್ಲಗಳೆದರೂ ಆದಕ್ಕೆ ಒಪ್ಪಬಾರದು. ಅನಾದಿ ಕಾಲದಿಂದಲೂ ನಮ್ಮ ಹಿರಿಯರು ಭಗವಂತನ ಅಸ್ತಿತ್ವವನ್ನು ಒಪ್ಪಿದ್ದು ಅದನ್ನು ಅಲ್ಲಗಳೆಯಲು ಸಾಧ್ಯವಿಲ್ಲ, ಹಾಗಾಗಿ ಶ್ರೇಷ್ಠ ಜೀವನ ಸಾಗಿಸಲು ಸಾತ್ವಿಕ ಭಾವನೆ ಇರಬೇಕು. ಹಾಗೆಯೇ ಭಗವಂತನಲ್ಲಿ ಅಪಾರ ಭಕ್ತಿ ಇರಬೇಕು. ಅಪಾರವಾದ ಭಕ್ತಿ ಅತ್ಯುನ್ನತ ಸ್ಥಾನಕ್ಕೆ ಕೊಂಡೊಯ್ಯುತ್ತದೆ'' ಎಂದು ಜಗದ್ಗುರು ಶ್ರೀ ವಿಧುಶೇಖರ ಭಾರತೀ ಶ್ರೀ ನುಡಿದರು.

> **250 ವರ್ಷ ಹಿಂದಿನ ಜಗದ್ಗುರುಗಳಾಗಿದ್ದ ಸಚ್ಚಿದಾನಂದ ಭಾರತೀತೀರ್ಥ ಸ್ವಾಮೀಜಿ ಅವರ ಆಸ್ಥಾನ ಕವಿ ಬರೆದ ಗ್ರಂಥದಲ್ಲಿ ಶೃಂಗೇರಿ ಹಾಗೂ ದಕ್ಷಿಣ ಕನ್ನಡದ ಜಿಲ್ಲೆಗೂ ಅವಿನಾಭಾವ ಸಂಬಂಧ ಸ್ಪಷ್ಟವಾಗಿದೆ. ಜಗದ್ಗುರುಗಳು ಹಾಲಾಡಿ, ಕುಂದಾಪುರ, ಉಡುಪಿಗೂ ಭೇಟಿ ಕೊಟ್ಟದ್ದು ಕಂಡುಬಂದಿದ್ದು ಸಂಬಂಧದ ವಿಷಯದಲ್ಲಿ ಪ್ರತ್ಯೇಕವಾಗಿ ಏನೂ ಹೇಳಬೇಕಿಲ್ಲ. ಹಾಗಾಗಿ ದಕ್ಷಿಣ ಕನ್ನಡದ ಶಿಷ್ಯರಿಗೆ ಶೃಂಗೇರಿ ಪೀಠದ ಮೇಲೆ ಬಹಳ ಭಕ್ತಿ. ಗುರುಗಳಿಗೂ ಅಪಾರ ಪ್ರೀತಿ. ಈ ಸಂಬಂಧವನ್ನು ಯಾರು ಏನು ಮಾಡಿದರೂ ಅಳಿಸಲಸಾಧ್ಯ.**
>
> **- ಶ್ರೀ ಭಾರತೀತೀರ್ಥರು**

ಕೆಪಿಸಿಸಿ ಅಧ್ಯಕ್ಷ ಡಾ। ಜಿ. ಪರಮೇಶ್ವರ್, ಸಚಿವರಾದ ಬಿ. ರಮಾನಾಥ ರೈ, ಯು.ಟಿ. ಖಾದರ್, ಅಭಯಚಂದ್ರ ಜೈನ್, ಸಂಸದರಾದ ನಳಿನ್ ಕುಮಾರ್ ಕಟೀಲು, ಶೋಭಾ ಕರಂದ್ಲಾಜೆ, ಮಂಗಳೂರು ವಿ.ವಿ. ಉಪಕುಲಪತಿ ಡಾ। ಕೆ. ಬೈರಪ್ಪ, ದ.ಕ. ಜಿ.ಪಂ. ಅಧ್ಯಕ್ಷೆ ಆಶಾ ತಿಮ್ಮಪ್ಪ ಗೌಡ, ಶಾಸಕರಾದ ಕ್ಯಾ। ಗಣೇಶ್ ಕಾರ್ಣಿಕ್, ಕೋಟ ಶ್ರೀನಿವಾಸ ಪೂಜಾರಿ, ಐವನ್ ಡಿಟಿಸೋಜಾ, ವಿಧಾನ ಸಭೆಯ



ಪೂರ್ಣಕುಂಭ ಸ್ವಾಗತದೊಂದಿಗೆ ಮೆರವಣಿಗೆಯಲ್ಲಿ ಶ್ರೀಗಳು

ಮಾಜಿ ಉಪ ಸಭಾಧ್ಯಕ್ಷ ಯೋಗೀಶ್ ಭಟ್, ಕರ್ನಾಟಕ ಬ್ಯಾಂಕ್ ಎಂಡಿ ಜಯರಾಂ ಭಟ್, ಸುರೇಂದ್ರ ಕುಮಾರ್ ಮಂಗಳೂರು ತಹಶೀಲ್ದಾರ್ ಕೆ. ಮೋಹನ ರಾವ್, ಕಸಾಪ ಮಾಜಿ ಅಧ್ಯಕ್ಷ ಹರಿಕೃಷ್ಣ ಪುನರೂರು, ಜಿಲ್ಲಾಧ್ಯಕ್ಷ ಪ್ರದೀಪ್ ಕುಮಾರ್ ಕಲ್ಕೂರ, ಕರ್ನಾಟಕ ಪ್ರಾಂತ ವಿಹಿಂಪ ಅಧ್ಯಕ್ಷ ಪ್ರೊ। ಎಂ.ಬಿ. ಪುರಾಣಿಕ್, ಮಂಗಳೂರು ಶ್ರೀ ಕಾಳಿಕಾಂಬಾ ವಿನಾಯಕ ದೇವಸ್ಥಾನದ ಕೆ. ಕೇಶವ ಆಚಾರ್ಯ, ವಿಧಾನ ಪರಿಷತ್ ಮಾಜಿ ಸದಸ್ಯ ಬಾಲಕೃಷ್ಣ ಭಟ್, ಕೋಟೆಕಾರು ಗ್ರಾ.ಪಂ. ಅಧ್ಯಕ್ಷ ಶೇಖರ ಕನೀರುತೋಟ, ಕಾಸರಗೋಡು ನಿವೃತ್ತ ಜಿಲ್ಲಾ ವಿದ್ಯಾಧಿಕಾರಿ ಪ್ರಮೋದ್ ಬೇಕಲ್, ಗದಗ ವೀರನಾರಾಯಣ ದೇವಸ್ಥಾನ ಅಧ್ಯಕ್ಷ ಕೆ. ಸುಧಾಕರ ರಾವ್, ಬಾಲಭವನ ಸೊಸೈಟಿ ಮಾಜಿ ಅಧ್ಯಕ್ಷ



ಏಕಾದಶ ರುದ್ರ ಹವನದ ಪೂರ್ಣಾಹುತಿಯಲ್ಲಿ ಶ್ರೀಗಳು

ಸುಲೋಚನಾ ಜಿ.ಕೆ. ಭಟ್, ಉಳ್ಳಾಲ ಚೀರುಂಭ ಭಗವತೀ ತೀಯಾ ಸೇವಾ ಸಂಘದ ಅಧ್ಯಕ್ಷ ಚಂದ್ರಹಾಸ್ ಉಳ್ಳಾಲ, ಬಿಜೆಪಿ ಕ್ಷೇತ್ರಾಧ್ಯಕ್ಷ ಚಂದ್ರಶೇಖರ ಉಚ್ಚಿಲ, ಎಂಆರ್‌ಪಿಎಲ್ ಆಡಳಿತ ನಿರ್ದೇಶಕ ಶ್ರಿಕುಮಾರ್, ಕರ್ನಾಟಕ ಬ್ಯಾಂಕ್ ಮಹಾ ಪ್ರಬಂಧಕ ಮಹಾಬಲೇಶ್ವರ ಭಟ್, ಶ್ರೀ ಶಂಕರ ಪೀಠದ ಗೌರವಾಧ್ಯಕ್ಷ ಎ. ಶಿವರಾವ್, ಗುರುವಂದನಾ ಸಮಿತಿ ಗೌರವಾಧ್ಯಕ್ಷ, ಮಾಜಿ ಶಾಸಕ ಕೆ. ಜಯರಾಮ ಶೆಟ್ಟಿ, ಅಧ್ಯಕ್ಷ ದಾಮೋದರ ನಿಸರ್ಗ ಹಾಗೂ ಕಾರ್ಯಾಧ್ಯಕ್ಷ ಸತೀಶ್ ಕುಂಪಲ ಉಪಸ್ಥಿತರಿದ್ದರು.

ಅಲ್ಲದೆ ಸಮಾರಂಭದಲ್ಲಿ ನಮ್ಮ ಸಮಾಜದ ಜಗನ್ನಿವಾಸ ರಾವ್ ಪುತ್ತೂರು, ಸಿ.ಎಸ್.ರಾವ್ ಮಂಗಳೂರು, ಅರುಣ್‌ಕುಮಾರ್ ಬೆಳ್ತಂಗಡಿ, ಬಿ.ಕೃಷ್ಣಮೂರ್ತಿರಾವ್ ಉಡುಪಿ, ಗಣೇಶ್ ರಾವ್ ಕುಂದಾಪುರ, ಹೆಚ್.ನಿರಂಜನ್ ಭಟ್ ಪಾವಂಜೆ, ವಾಸುದೇವ ಉಪಾಧ್ಯಾಯ ಪಾವಂಜೆ, ಎಂ.ಕೆ.ಮೋಹನ್‌ರಾವ್ ಪಡುಬಿದ್ರಿ ಮೊದಲಾದವರು ಉಪಸ್ಥಿತರಿದ್ದರು. ಶ್ರೀಮಠದ ಧರ್ಮಾಧಿಕಾರಿಗಳಾದ ಸತ್ಯಶಂಕರ ಬೊಳ್ಳಾವ ಇವರು ಕಾರ್ಯಕ್ರಮವನ್ನು ಸಂಘಟಿಸಿದ್ದು, ನಮ್ಮ ಸಮಾಜದ ವಿವಿಧ ಸಂಘಟನೆಗಳ ಪದಾಧಿಕಾರಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಕೋಟೆಕಾರು ಶ್ರೀ ಶಂಕರ ಪ್ರತಿಷ್ಠಾನದ ಅಧ್ಯಕ್ಷ ಎಂ.ಆರ್. ವಾಸುದೇವ ರಾವ್ ಸ್ವಾಗತಿಸಿದರು. ಹಿರಣ್ಯ ವೆಂಕಟೇಶ್ ಭಟ್ ಬಾಯಾರು ಕಾರ್ಯಕ್ರಮ ನಿರೂಪಿಸಿದರು.

**ಬೆಳಿಗ್ಗೆ ಆಗಮನ....**

ಎಪ್ರಿಲ್ 11ರಂದು ಬೆಳಿಗ್ಗೆ 10.30ಕ್ಕೆ ಉಭಯ ಶ್ರೀಗಳೂ ತಮ್ಮ ಪರಿವಾರದೊಂದಿಗೆ ಮಂಗಳೂರು ಕೋಟೆಕಾರಿನ ಶ್ರೀ ಶಂಕರ ಮಠಕ್ಕೆ ಆಗಮಿಸಿದಾಗ ವೇದಘೋಷ ಹಾಗೂ ಪೂರ್ಣ ಕುಂಭ ಸ್ವಾಗತದೊಂದಿಗೆ ಶ್ರೀಗಳವರನ್ನು ಬರಮಾಡಿಕೊಂಡು, ಮೆರವಣಿಗೆಯೊಂದಿಗೆ ಶ್ರೀ ಶಾರದಾಂಬಾ, ಶ್ರೀ ಗಣಪತಿ, ಮತ್ತು ಶ್ರೀ ಶಂಕರಾಚಾರ್ಯ ಮಂದಿರಕ್ಕೆ ಕರೆತರಲಾಯಿತು. ಅಲ್ಲಿ ಮಂಗಳಾರತಿಯ ನಂತರ ವೇದಿಕೆಯಲ್ಲಿ ಆಸೀನರಾದ ಉಭಯ ಶ್ರೀಗಳವರ ದೂಳೀ ಪಾದ ಪೂಜೆ ನೆರವೇರಿತು. ನಂತರ ಅಂದು ನಡೆದ ರುದ್ರ ಏಕಾದಶೀ ಹವನದ ಪೂರ್ಣಾಹುತಿಯು ಜಗದ್ಗುರುಗಳ ಉಪಸ್ಥಿತಿಯಲ್ಲಿ ಸಂಪನ್ನಗೊಂಡಿತು.

**ಸಮಷ್ಠಿ ಬಿಕ್ಷೆ-ಹೊರೆ ಕಾಣಿಕೆ**

ನಂತರ ವಿವಿಧ ಸಂಘ ಸಂಸ್ಥೆಗಳಿಂದ ಬೇರೆ ಬೇರೆ ಶಿಷ್ಯ ವರ್ಗಗಳಿಂದ ಪಾದ ಪೂಜೆ ನೆರವೇರಿತು. ಅಲ್ಲದೆ ಸಮಸ್ತ ಸ್ಥಾನಿಕ ಬ್ರಾಹ್ಮಣ ಸಮಾಜದ ವತಿಯಿಂದ ಸಮಷ್ಠಿ ಭಿಕ್ಷೆಯೂ ವಿವಿಧ ಸಂಘಟನೆಗಳು ಮತ್ತು ಶ್ರೀ ಕ್ಷೇತ್ರ ಶೃಂಗೇರಿಯ ಶಾರದ ಪೀಠದ ಶಿಷ್ಯವರ್ಗದವರಿಂದ ಸುವಸ್ತುಗಳ ಹೊರೆ ಕಾಣಿಕೆಯನ್ನು ಜಗದ್ಗುರುಗಳಿಗೆ ಸಮರ್ಪಿಸಲಾಯಿತು. ನಂತರ ಆಗಮಿಸಿದ ಎಲ್ಲಭಕ್ತ ಬಾಂಧವರಿಗೆ ಅನ್ನ ಸಂತರ್ಪಣೆ ನೆರವೇರಿತು.

## ಸ್ಥಾನಿಕ ಬ್ರಾಹ್ಮಣ ಸಭಾ (ರಿ)

ರಿ. ನಂ. 287/95, (ಶಿವ ಬ್ರಾಹ್ಮಣ ಸಭಾ)

ಡೋರ್ ನಂ. 24/535, ಬ್ಯಾಂಕ್ ರೋಡ್ ಕಾಸರಗೋಡು, ಕೇರಳ

**ಪ್ರಕಟಣೆ**

ಕಾಸರಗೋಡಿನಲ್ಲಿ ಶಿವಬ್ರಾಹ್ಮಣ/ಸ್ಥಾನಿಕ ಬ್ರಾಹಣರ ಸಂಘಟನೆಯಿದ್ದು, ಅದು ಸ್ಥಾನಿಕ ಬ್ರಾಹ್ಮಣ ಸಭಾ/ಶಿವಬ್ರಾಹ್ಮಣ ಸಭಾ ಎಂಬ ಹೆಸರುಗಳಂದ ಕರೆಯಲ್ಪಡುತ್ತಿದೆ. ಆದರೆ ಇತ್ತೀಚೆಗೆ ನಮ್ಮ ಸಮಾಜಕ್ಕೆ ಸೇರದ (ಕಳೆದ ಸಂಚಿಕೆಯಲ್ಲಿ ತಪ್ಪಾಗಿ ಮುದ್ರಿತವಾಗಿತ್ತು) ಕೆಲವು ವ್ಯಕ್ತಿಗಳು ಶಿವಬ್ರಾಹ್ಮಣ ಸಂಘ ಎಂಬ ಹೆಸರಿನಿಂದ ಹೊಸ ಸಂಘ ಸ್ಥಾಪಿಸಿರುವುದು ನಮ್ಮ ಗಮನಕ್ಕೆ ಬಂದಿದೆ. ನಮ್ಮಲ್ಲಿಯ ಶಿವಬ್ರಾಹ್ಮಣರಿಗೂ ಈ ಸಂಘದ ಸದಸ್ಯರಿಗೂ ಯಾವುದೇ ರೀತಿಯ ಸಂಬಂಧವೂ ಇಲ್ಲ. ಅವರು ಯಾರೂ ಅಖಿಲ ಭಾರತ ಸ್ಥಾನಿಕ ಮಹಾಮಂಡಲದ ಸದಸ್ಯರಲ್ಲ. ನಮ್ಮ ವರ್ಗಕ್ಕೆ ಅವರು ಸೇರಿದವರಲ್ಲ. ಸಮಾಜ ಬಾಂಧವರಲ್ಲಿ ತಪ್ಪಭಿಪ್ರಾಯ ಬರಬಾರದೆಂದು ಈ ಪ್ರಕಟಣೆಯನ್ನು ಕೊಟ್ಟಿರುತ್ತೇವೆ. ಈ ವಿಚಾರದಲ್ಲಿ ಯಾವುದೇ ಹೆಚ್ಚಿನ ಮಾಹಿತಿ ಬೇಕಾದರೆ ಈ ಕೆಳಗಿನವರನ್ನು ಸಂಪರ್ಕಿಸಬಹುದು.

1) ಡಾ। ಎಂ ಸತ್ಯನಾಥ-09447347170 2) ಶುಭಕರ ಶ್ಯಾನುಭೋಗ್-09895810729 3) ಮನೋಹರ ಎ.-09495180294

**- ಅಧ್ಯಕ್ಷರು.**

## ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯಸ್ವಾಮಿ ದೇವಸ್ಥಾನ

**ಪಾವಂಜೆ ಹಳೆಯಂಗಡಿ**

## ಪಾವಂಜೆಯಲ್ಲಿ ರಥೋತ್ಸವ

**ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯಸ್ವಾಮಿ ದೇವಸ್ಥಾನ, ಪಾವಂಜೆ ಹಳೆಯಂಗಡಿ ಇಲ್ಲಿ ದಿನಾಂಕ 13-04-2015ರಿಂದ ದಿನಾಂಕ 19-04-2015ರವರೆಗೆ ವಾರ್ಷಿಕ ಉತ್ಸವಾದಿ ಕಾರ್ಯಕ್ರಮಗಳು ನೆರವೇರಲಿವೆ.**

**ದಿನಾಂಕ 14ರಂದು ಧ್ವಜಾರೋಹಣ ಮತ್ತು 18ರಂದು ರಥೋತ್ಸವ ಮತ್ತು ಮಹಾ ಅನ್ನ ಸಂತರ್ಪಣೆಯೂ ನಡೆಯಲಿದೆ.**

**ಭಕ್ತ ಬಾಂಧವರು ಈ ಎಲ್ಲಾ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಪ್ರಸಾದ ಸ್ವೀಕರಿಸಿ ಶ್ರೀ ದೇವರ ಕೃಪೆಗೆ ಪಾತ್ರರಾಗಬೇಕೆಂದು ವಿನಂತಿ.**

**- ಶ್ರೀ ದೇವಳದ ಆಡಳಿತ ಮಂಡಳಿ**

# ಒಂದು ಪ್ರಬುದ್ಧ ಕವನ ಸಂಕಲನ–ಚಂದ್ರಚಾಪ

– ಕೃಷ್ಣ ಕುಮಾರ್ ರಾವ್, ಮಟ್ಟು.

1970ರಲ್ಲಿ ನಾನು ಹೈಸ್ಕೂಲ್ ಶಿಕ್ಷಣ ಓದುತ್ತಿದ್ದ ಸಮಯ. ನಂದಳಿಕೆಯ "ಉರ್ಕಿತೊಟ್ಟು" ಎಂಬಲ್ಲಿ ನಡೆದ ಹರಿಕಥೆ 'ಕುಮಾರ ಸಂಭವ' ಕಥೆ. ಹರಿದಾಸರು ಪುರಂದರದಾಸರ "ತಾಳುವಿಕೆಗಿಂತ ಅನ್ಯ ತಪವಿಲ್ಲ" ಪದ್ಯವನ್ನು ಶುಶ್ರಾವ್ಯವಾಗಿ ಹಾಡಿ, ಪೀಠಿಕೆ ಹೇಳುತ್ತಾ 'ಕಟ್ಟು ಬುತ್ತಿಯ ಮುಂದೆ ಉಣಲುಂಟು ತಾಳು' ಎಂಬ ಒಂದೇ ಸಾಲನ್ನು ಹರಿಕಥೆಯ ಪ್ರಾರಂಭದಿಂದ ಕೊನೆಯವರೆಗೆ ಸಾಂದರ್ಭಿಕವಾಗಿ ಅಲ್ಲಲ್ಲಿ ಉಚ್ಚರಿಸುತ್ತಾ ನಮ್ಮ ಜೀವನ ಶೈಲಿಯಲ್ಲಿ "ತಾಳ್ಮೆ" ಹೇಗೆ ಇರಬೇಕೆಂದು ಸಾರುತ್ತಾ ಇಡೀ 'ಕುಮಾರ ವಿಜಯ' ಕಥಾನಕವನ್ನು ಪ್ರಸ್ತುತ ಪಡಿಸಿದ್ದರು. ಅಂದಿನ ಹರಿಕಥೆ ಮಾಡಿದ ಆ ಹರಿದಾಸರೇ ಮ.ನಾ.ಹೆಬ್ಬಾರರು.

ಅಲ್ಲಿಂದ ನಂತರ ಅವರ ಅನೇಕ ಹರಿಕಥೆಗಳನ್ನು ಆಲಿಸಿದ್ದೇನೆ. ಇಂದಿಗೂ ಹರಿದಾಸರಾಗಿ ಹರಿಕಥಾ ಕಾರ್ಯಕ್ರಮಗಳನ್ನು ನೀಡುತ್ತಿದ್ದಾರೆ. ಯಕ್ಷಗಾನ ಕಲಾವಿದರಾಗಿ, ಅರ್ಥಧಾರಿಗಳಾಗಿ ಇಂದಿಗೂ ಮಿಂಚುತ್ತಿದ್ದಾರೆ.

ವೃತ್ತಿಯಲ್ಲಿ ಉಪನ್ಯಾಸಕರಾಗಿರುವ ಶ್ರೀ ಮರೂರು ನಾರಾಯಣ ಹೆಬ್ಬಾರರು ವಿವಿಧ ತರಗತಿಗಳ ವಿವಿಧ ವಿದ್ಯಾರ್ಥಿಗಳಿಗೆ ಪಾಠ ಹೇಳಿರುವ ಅನುಭವಿ ಉಪನ್ಯಾಸಕರು. ಕನ್ನಡ ಭಾಷೆಯ ಬಗ್ಗೆ, ಕನ್ನಡ ಕವಿಗಳ ಬಗ್ಗೆ, ಕನ್ನಡ ಕಾವ್ಯಗಳ ಬಗ್ಗೆ, ಕನ್ನಡ ಸಾಹಿತ್ಯದ ಬಗ್ಗೆ ಸ್ವತಃ ಅಧ್ಯಯನ ಮಾಡಿರುವ ಇವರ ಈ ಉಪನ್ಯಾಸಕ ವೃತ್ತಿಯ ನಿವೃತ್ತ ಜೀವನದಲ್ಲಿ ಹೊರಬಂದ ಕೃತಿ "ಚಂದ್ರಚಾಪ".

'ಚಂದ್ರಚಾಪ'ವೆಂಬ ಕವನ ಸಂಕಲನ ಬಿಡುಗಡೆಯಾಗಿದೆ ಎಂದು ದೂರವಾಣಿ ಮೂಲಕ ಹೇಳಿದ್ದನ್ನು ಕೇಳಿಸಿಕೊಂಡು, ಅರ್ಥೈಸಿಕೊಂಡದ್ದು "ಚಂದ್ರಶಾಪ"ವೆಂದು. ಅಂತೆಯೇ ಕಳೆದ ತಿಂಗಳ ಶ್ರೀ ಶಾರದಾ ಪತ್ರಿಕೆಯಲ್ಲಿ ಆ ತಪ್ಪು ಶೀರ್ಷಿಕೆಯನ್ನೇ ಪ್ರಕಟಿಸಿದ್ದಾಗಿದೆ. ಬಿಡುಗಡೆಗೊಂಡ ಕೃತಿ ನನ್ನ ಕೈಗೆ ಬಂದಾಗ ನನ್ನಿಂದಾದ ತಪ್ಪನ್ನೂ ಒಪ್ಪಿಕೊಂಡೆ.

ಪುಸ್ತಕದ ಮುನ್ನುಡಿಯಲ್ಲಿ ಖ್ಯಾತ ಸಾಹಿತಿಗಳಾದ ಡಾ। ಪಾದೆಕಲ್ಲು ವಿಷ್ಣುಭಟ್ಟರು ಹೇಳಿರುವಂತೆ ನಡುಗನ್ನಡಕಾಲದ ಛಂದೋಬಂಧಗಳಿಂದ ಕೂಡಿದ ಅನೇಕ ಕವನಗಳಿಂದ ಈ ಪುಸ್ತಕವು ಅಲಂಕೃತವಾಗಿದೆ. ಈ ಆಧುನಿಕ ಯುಗದಲ್ಲಿ ಶರ, ಭೋಗ ಷಟ್ಪದಿಯಂತಹ ಕ್ಲಿಷ್ಟಕರ ರಚನೆಯ ಹಳೆಯ ಬಂಧಗಳಿಂದ ಗೇಯತೆ ಮತ್ತು ಲಯದಿಂದ ಕೂಡಿದ ಕವನಗಳನ್ನು ಆಧುನಿಕ ವಿಚಾರಧಾರೆಯೊಂದಿಗೆ ಮ ನಾ ಹೆಬ್ಬಾರರು ನಮ್ಮ ಇಂದಿನ ಜನತೆಗೆ ಅರ್ಪಿಸಿದ್ದಾರೆ. ಇದು ಇಂದಿನ ಸಮಕಾಲೀನ ಸಾಹಿತ್ಯದಲ್ಲಿ ಒಂದು ಅಪರೂಪದ ಕೃತಿ.

ಹಲವು ಕವನಗಳು ಆದಿಪ್ರಾಸ–ಅಂತ್ಯ ಪ್ರಾಸದಿಂದೊಡಗೂಡಿ ವಾಚನ ಮತ್ತು ಬಾಯಿಪಾಠಕ್ಕೆ ಸುಲಭ ಸಾಧ್ಯವಾಗಿದೆ. 'ಕನ್ನಡ ಮಾತೆಗೆ ನಮನ' ಕರ್ನಾಟಕದ ಸಮಗ್ರ ಚರಿತ್ರೆ ತಿಳಿಯಲು ಸಹಕಾರಿಯಾದರೆ 'ಭಾರತಾಂಬೆ'ಯು ನಮ್ಮ ಸಂಸ್ಕೃತಿಯ ತಿಳುವಳಿಕೆಯನ್ನು ನೀಡುವುದು. 'ಸ್ವಾತಂತ್ರ್ಯ'ದಲ್ಲಿ ಈಗಿನ ರಾಜಕೀಯ ಪಿತೂರಿಗಳ ವಿಡಂಬನೆ ಇದ್ದರೆ, 'ಬಾಳೆಗಿಡ' 'ಮೂರ್ಖಶತ್ರು' 'ಗೋಮಾತೆ''ಮರಳಿಯತ್ನವ ಮಾಡು' ಕವನಗಳಲ್ಲಿ ಈಗಿನ ಜನತೆಗೆ ಹಿರಿತನದ ಬುದ್ಧಿಮಾತು ಹೇಗಿರಬೇಕೆಂಬ ಭಾವಾರ್ಥ ತುಂಬಿದೆ. 'ಅರ್ಚನೆ' ಮತ್ತು 'ಎನ್ನನೇ ನಿನಗೀಯುವೆ' ಗಳಲ್ಲಿ ಕವಿಯ ಅರ್ಪಣಾ ಭಾವದ ಹೊರಚೆಲ್ಲುವಿಕೆ, 'ಹಂದಿಜ್ವರ' 'ರಸಿಕ–ಹುಸಿಕ' 'ತಾಜ್‌ಮಹಲ್ ಮಂದಿರ' ಮೊದಲಾದ ಕವನಗಳಲ್ಲಿ ಆಧುನಿಕತೆಯ ಚಾಪು ಮೂಡಿಬಂದಿದೆ. ಕವಿ ಸಹಜ ಪ್ರತಿಕ್ರಿಯೆಗಳಾದ ಪ್ರಕೃತಿಯ ವರ್ಣನೆ ಮತ್ತು ಹಳ್ಳಿಯ ಜೀವನ ಶೈಲಿಯ ಚಿತ್ರಣ 'ಹುಣ್ಣಿಮೆ ಚಂದಿರ''ನವಿಲು' 'ಸುಪ್ರಭಾತ' 'ಸೂರ್ಯಾಸ್ತ ವೀಕ್ಷಣೆ' 'ಆಗುಂಬೆಯ ಸೂರ್ಯಾಸ್ತ' 'ವನಭೋಜನ' 'ಚಿಟ್ಟೆ ಉದ್ಯಾನ' 'ಋತುಚಕ್ರ' 'ಮಳೆಗಾಗಿ ಕರೆ' 'ಬಾಲ್ಕನಿಯಿಂದ' 'ಹೆಬ್ಬೇರಿ' ಮೊದಲದ ಕವನಗಳು ಸಾಕಷ್ಟು ಉದಾಹರಣೆಗಳಾಗಬಹುದು.

'ವರಕವಿ ಮುದ್ದಣ'ದಲ್ಲಿ ನಂದಳಿಕೆ ಲಕ್ಷ್ಮೀನಾರಣಪ್ಪನ ಜೀವನ ಚರಿತ್ರೆ ಹಾಗೂ ಆತನ ರಚನೆಯ ಕಾವ್ಯಗಳನ್ನು ಓದಿದ ಅನುಭವಗಳನ್ನು ಕಾವ್ಯ ರೂಪದಲ್ಲಿ ಬರೆದಿದ್ದರೆ, ಆದಿ ಶಂಕರಾಚಾರ್ಯರ ಜೀವನ ಚರಿತ್ರೆಯನ್ನು ಕೇವಲ ಹತ್ತು ಪದ್ಯಗಳ ಮೂಲಕ ಕವನದಲ್ಲಿ ಸಾದರಪಡಿಸಿದ್ದಾರೆ.

ಆಂಗ್ಲ ಭಾಷೆಯ ಕೆಲವು ಶ್ರೇಷ್ಠ ಕವಿತೆಗಳನ್ನೂ ಅತ್ಯುತ್ತಮ ರೀತಿಯಲ್ಲಿ ಭಾಷಾಂತರ ಮಾಡಿರುತ್ತಾರೆ. ಅಮೇರಿಕಾ ದೇಶದಲ್ಲಿದ್ದು, ಅಲ್ಲಿನ ಹಲವು ವೀಕ್ಷಣಾ ಸ್ಥಳಗಳ ಸೌಂದರ್ಯ ವರ್ಣನೆಯ ಕವನಗಳೂ ಈ ಸಂಕಲನದಲ್ಲಿದೆ. ಇನ್ನುಳಿದ ಪದ್ಯಗಳು ಕವಿಯ ಹಾಸ್ಯಪ್ರಜ್ಞೆ, ಜೀವನಾನುಭವ. ತಮ್ಮ ವೃತ್ತಿ ಜೀವನದಲ್ಲಿ ಕಂಡ ಸತ್ಯ ಘಟನೆಗಳನ್ನು ಕವನಕ್ಕಿಳಿಸಿದ್ದಾರೆ.

ಒಟ್ಟಿನಲ್ಲಿ 'ಚಂದ್ರಚಾಪ' ಕವನ ಸಂಕಲನವು ಓದುಗರಿಗೆ ರಂಜನೆ ನೀಡುವುದಲ್ಲದೆ ಓದುಗನ ಜೀವನ ಶೈಲಿಯ ಮೇಲೂ ಪ್ರಭಾವ ಬೀರಬಲ್ಲ ಕೃತಿಯಾಗಿದೆ. ಪ್ರೌಢತೆ,ಪ್ರಬುದ್ಧತೆ, ಶ್ರೇಷ್ಟ ಪದಪುಂಜಗಳಿಂದ ಕೂಡಿದ ಈ ಕವನ ಸಂಕಲನವು ಮುಂದಿನ ದಿನಗಳಲ್ಲಿ ಸಾಹಿತ್ಯವನ್ನು ಅಭ್ಯಾಸ ಮಾಡುವ ಯಾವುದೇ ತರಗತಿಯ ವಿದ್ಯಾರ್ಥಿಗಳಿಗೆ ಕರ್ನಾಟಕದ ಯಾವುದೇ ವಿಶ್ವ ವಿದ್ಯಾನಿಲಯವು ಪಠ್ಯಪುಸ್ತಕವನ್ನಾಗಿ ಆರಿಸಿಕೊಳ್ಳಲಿ. ಅಲ್ಲದೆ ಕವಿ ಹೃದಯಿ ಮ.ನಾ.ಹೆಬ್ಬಾರರಿಂದ ಇನ್ನೂ ಇಂತಹ ಹತ್ತು ಹಲವು ಅನುಭವೀ ಕೃತಿಗಳು ಹೊರಬರಲಿ ಎಂದು ನನ್ನ ಶುಭ ಹಾರೈಕೆ.

## 10ನೇ ತರಗತಿಯ ವಿಶೇಷ ಪರೀಕ್ಷಾಪೂರ್ವತಯಾರಿ ಶಿಬಿರ–ಪಾಲಕರ ಹಾಗೂ ಶಿಬಿರಾರ್ಥಿಗಳ ಪ್ರಶಂಸೆ

■...1ನೇ ಪುಟದಿಂದ

**ತರಬೇತಿ ಶಿಬಿರ :**

ಮೊದಲನೆಯ ಅವಧಿಯಲ್ಲಿ ಉಡುಪಿ–ಮಣಿಪುರ ಸರಕಾರಿ ಪ್ರೌಢಶಾಲೆಯಲ್ಲಿ ಮುಖ್ಯೋಪಾಧ್ಯಾಯಿನಿಯಾಗಿರುವ ಶ್ರೀಮತಿ ನಿವೇದಿತಾ ಇವರು ಬದಲಾದ ಪರೀಕ್ಷಾ ಪದ್ಧತಿ, ಮೌಲ್ಯಮಾಪನ, ಅಂಕಪಟ್ಟಿಯಲ್ಲಿ ಗ್ರೇಡಿಂಗ್ ನಮೂದಿಸುವುದು ಹಾಗೂ ಅಂಕಪಟ್ಟಿಯಲ್ಲಿನ ಬಿ–ವಿಭಾಗದ ವಿಷಯದ ಮಾಹಿತಿ ನೀಡಿದರು. ತದನಂತರ ಉದ್ಯಾವರದ ಸೈಂಟ್ ಫ್ರಾನ್ಸಿಸ್ ಕ್ಸೇವಿಯರ್ ಪ್ರೌಢಶಾಲೆಯ ಹಿರಿಯ ಅಧ್ಯಾಪಕರಾದ ಶ್ರೀನಿವಾಸ್‌ರಾವ್ ಇವರು ಜೀವಶಾಸ್ತ್ರದ ಪ್ರಮುಖ ಪ್ರಶ್ನೆಗಳನ್ನು ಚರ್ಚಿಸುತ್ತಾ ಅತ್ಯುತ್ತಮ ಮಾಹಿತಿಗಳನ್ನು ನೀಡುತ್ತಾ ಅಧಿವೇಶನವನ್ನು ನಡೆಸಿಕೊಟ್ಟರು.

ಭೌತಶಾಸ್ತ್ರ ಹಾಗೂ ರಸಾಯನಶಾಸ್ತ್ರದ ಅಧಿವೇಶನವನ್ನು ಹಂಗಾರಕಟ್ಟೆ ಚೇತನಾ ಪ್ರೌಢಶಾಲೆಯ ಅಧ್ಯಾಪಕರಾದ ಶ್ರೀ ಗೋವಿಂದರಾವ್ ಇವರು ವಿದ್ಯಾರ್ಥಿಗಳಿಗೆ ಪ್ರಮುಖ ಪ್ರಶ್ನೆ ಪತ್ರಿಕೆಗಳನ್ನು ನೀಡಿ ಅದರ ಕುರಿತು ಚರ್ಚಿಸುತ್ತಾ ಅಧಿವೇಶನವನ್ನು ಆಕರ್ಷಕವಾಗಿ ನಡೆಸಿಕೊಟ್ಟರು.

ಮಧ್ಯಾಹ್ನದ ಭೋಜನ ವಿರಾಮದ ನಂತರ ಕುಕ್ಕುಂದೂರು ದುರ್ಗಾ ಪ್ರೌಢ ಶಾಲೆಯ ಶಿಕ್ಷಕರಾದ ಶ್ರೀ ಸತ್ಯನಾರಾಯಣ ಭಟ್ ಇವರು ಗಣಿತ ವಿಷಯದ ಬಗ್ಗೆ ನೀಲನಕ್ಷೆಯ ಪ್ರಕಾರ ಪಾಠ ಹಾಗೂ ಅಂಕಗಳಿಗೆ ಅನುಗುಣವಾಗಿ ಪ್ರಮುಖ ಪ್ರಶ್ನೆಗಳನ್ನು ಚರ್ಚಿಸಿ ಸುಲಭ ವಿಧಾನಗಳನ್ನು ತಿಳಿಸಿದರು.

**ಸಮಾರೋಪ ಸಮಾರಂಭ :**

ಸಾಯಂಕಾಲದ ಸರಳ ಸಮಾರೋಪ ಸಮಾರಂಭವು ಸಂಘದ ಅಧ್ಯಕ್ಷರಾದ ಪ್ರಫುಲ್ಲಚಂದ್ರ ರಾವ್ ಇವರ ಅಧ್ಯಕ್ಷತೆಯಲ್ಲಿ ಜರುಗಿತು. ವೇದಿಕೆಯಲ್ಲಿ ಸಂಘದ ಉಪಾಧ್ಯಕ್ಷರಾದ ವೇಣು ಗೋಪಾಲ್ ರಾವ್, ಅರವಿಂದ ಕುಮಾರ್, ಬಿ. ಕೃಷ್ಣಮೂರ್ತಿರಾವ್, ಡಾ। ರವೀಂದ್ರನಾಥ ರಾವ್ ಉಪಸ್ಥಿತ ರಿದ್ದರು.

ಡಾ। ರವೀಂದ್ರನಾಥ ರಾವ್ ಎಲ್ಲರನ್ನೂ ಸ್ವಾಗತಿಸಿದರು. ಬಳಿಕ ಪ್ರಫುಲ್ಲಚಂದ್ರ ರಾವ್ ತಮ್ಮ ಅಧ್ಯಕ್ಷ ನುಡಿಯಲ್ಲಿ ಶಿಬಿರಾರ್ಥಿಗಳೆಲ್ಲರೂ ಉತ್ತಮ ಫಲಿತಾಂಶ ಪಡೆಯುವಂತಾಗಲಿ ಎಂದು ಹಾರೈಸಿದರು. ವೇಣುಗೋಪಾಲ್ ರಾವ್ ಶಿಬಿರಾರ್ಥಿಗಳೆಲ್ಲರಿಗೂ ಶುಭಾಶಂಸನೆಗೈದರು.

ಸಮಾರೋಪದ ಧನ್ಯವಾದ ಸಮರ್ಪಣೆಯಲ್ಲಿ ಸಂಚಾಲಕರಾದ ಶ್ರೀ ಪ್ರಭಾಕರ ಭಂಡಿ ಹಲವು ವರ್ಷಗಳಿಂದ ಏರ್ಪಡಿಸುತ್ತಿರುವ ಶಿಬಿರಗಳಿಗೆ ಸಂಘದ ಅಧ್ಯಕ್ಷರು, ಕಾರ್ಯದರ್ಶಿ, ಖಜಾಂಚಿ ಹಾಗೂ ಎಲ್ಲಾ ನಿರ್ದೇಶಕರುಗಳ ಪ್ರೋತ್ಸಾಹವೇ ಪ್ರಮುಖ ಕಾರಣ ಎಂದು ಎಲ್ಲರನ್ನೂ ಸ್ಮರಿಸಿದರು.

ಶಿಬಿರವನ್ನು ಸಂಘಟಿಸಲು ಪ್ರಫುಲ್ಲಚಂದ್ರರಾವ್, ಮಟ್ಟು ಕೃಷ್ಣ ಕುಮಾರ್ ರಾವ್, ಅರವಿಂದ ಕುಮಾರ್, ಬಿ.ಕೃಷ್ಣಮೂರ್ತಿರಾವ್, ಟಿ.ಜಗದೀಶರಾವ್, ಪ್ರಕಾಶರಾವ್ ಕೋಲ್ಪೆ, ವೈ.ಅಜಿತ್‌ರಾವ್ ಹಾಗೂ ಶಿಕ್ಷಣ ತರಬೇತಿ ವೇದಿಕೆಯ ಅಧ್ಯಕ್ಷರಾದ ಡಾ। ವೈ. ರವೀಂದ್ರನಾಥ್ ರಾವ್ ಇವರೆಲ್ಲರೂ ಸಹಕರಿಸಿದರು.

### ಶಿಬಿರಾರ್ಥಿಗಳ ಅನಿಸಿಕೆಗಳು :

*ಅತಿಕಡಿಮೆ ಸಮಯದಲ್ಲಿಗಣಿತ, ವಿಜ್ಞಾನ ವಿಷಯವನ್ನು ಚರ್ಚಿಸಿ ಮನದಟ್ಟು ಮಾಡಿರುವುದು ಪರೀಕ್ಷೆಗೆ ಪೂರಕ.*

*–ಕಾರ್ತಿಕೇಯ ಹರಿಕೃಷ್ಣರಾವ್, ಉಡುಪಿ.*

*ಈ ತರಬೇತಿಯಿಂದ ಕಲಿಕಾ ವಿಷಯಗಳ ಜ್ಞಾನ ವೃದ್ಧಿಯೊಂದಿಗೆ ನಮ್ಮ ಸಮಾಜ ಬಾಂಧವರ ಪರಿಚಯವಾಯಿತು.*

*– ಸುದೇಷ್ಣಾ ನಟರಾಜರಾವ್, ಪರ್ಕಳ.*

**ಖಂಡಿತವಾಗಿಯೂ ಅಂಕ ಹೆಚ್ಚಿಸಲು ಈ ಶಿಬಿರ ಪೂರಕ.**

*– ಸುಮಶ್ರೀ ಸುರೇಶ್‌ರಾವ್, ಮಂಗಳೂರು.*

### ಹೆತ್ತವರ ಅನಿಸಿಕೆಗಳು :

**ಶಿಬಿರವುಅತ್ಯುತ್ತಮವಾಗಿತ್ತು. ಆದರೆ ಇನ್ನೂ ಸ್ವಲ್ಪ ಮೊದಲು ಎರಡು ಹಂತಗಳಲ್ಲಿ ಏರ್ಪಡಿಸಿದ್ದರೆ ಉತ್ತಮವಾಗಿರುತ್ತಿತ್ತು.**

*– ಸುರೇಶ್‌ರಾವ್, ಮಂಗಳೂರು.*

**ಶಿಬಿರವು ಶಾಲೆಗಳಲ್ಲಿ ನೀಡದ ಮಾಹಿತಿಗಳನ್ನು ನೀಡಿ ಪರೀಕ್ಷೆಗೆ ಸಹಕಾರಿಯಾಗಿತ್ತು.**

*– ಶ್ರೀಮತಿ ಉಷಾರಾಧಾಕೃಷ್ಣ ರಾವ್, ಬಪ್ಪನಾಡು.*

## ಕಾಂತಮಂಗಲದಲ್ಲಿ ಪ್ರತಿಷ್ಠಾ ದಿನೋತ್ಸವ

ಶ್ರೀ ಸುಬ್ರಹ್ಮಣ್ಯ ದೇವಸ್ಥಾನ ಕಾಂತಮಂಗಲ ಇಲ್ಲಿ ಶ್ರೀ ದೇವರ ಪ್ರತಿಷ್ಠಾ ದಿನೋತ್ಸವವು ದಿನಾಂಕ 18–2–2015ರಂದು ಶ್ರೀ ಕ್ಷೇತ್ರದ ತಂತ್ರಿಗಳಾದ ಬ್ರಹ್ಮಶ್ರೀ ಪಾವಂಜೆ ವಾಗೀಶ ಶಾಸ್ತ್ರಿಯವರ ನೇತೃತ್ವದಲ್ಲಿ ಭಕ್ತ ಬಾಂಧವರ ಸಹಕಾರದೊಂದಿಗೆ ವಿವಿಧ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಸಂಪನ್ನಗೊಂಡಿತು.

## ಗೃಹಪ್ರವೇಶ

ಶ್ರೀಮತಿ ಮೀನಾಕ್ಷಿ ಅಕ್ಷಯ್ ಮತ್ತು ಶ್ರೀ ಅಕ್ಷಯ್ ಬಿ. ಇವರು ಬೆಂಗಳೂರಿನ ಅಮೃತಹಳ್ಳಿಯಲ್ಲಿ ನಿರ್ಮಿಸಿದ ನೂತನ ಮನೆ "ಪೂರ್ಣಚಂದ್ರ"ದ ಪ್ರವೇಶೋತ್ಸವನ್ನು ದಿನಾಂಕ 29–03–2015 ರಂದು ಬಂಧು ಬಾಂಧವರೊಡಗೂಡಿ ನೆರವೇರಿಸಿದರು.

# ಯಕ್ಷಗಾನ ಸ್ಮರಣಿಕೆಗಳ ಸರದಾರ ಕಲಾವಿದ ಶ್ರೀಧರ ರಾವ್ ಅಡೂರು



ಈ ಭೂಮಿ ಪ್ರಕೃತಿಯ ಪರ್ಣಶಾಲೆ. ಅರಣ್ಯ ರಮಣೀಯ ವಿಲಾಸ ಕ್ಷೇತ್ರ. ದಿಗಂತದ ಮಹಾಸ್ವಪ್ನಗಳಂತೆ ಧೀರವಾಗಿ ಎದ್ದು ನಿಂತ ಪರ್ವತಶ್ರೇಣಿಗಳು, ಅದನ್ನು ಆನಿಸಿಕೊಂಡಿರುವ ಚಿರಶ್ಯಾಮಲ ಕಾನನರಾಜಿ, ತರುಚ್ಛಾಮಯವಾದ ಗಿರಿಶಿಖರಗಳ ಅರೆಬಂಡೆಗಳ ವಕ್ರಪಥದಲ್ಲಿ ಹರಿಯುತ್ತಿರುವ ಹೊರೆ ತೊರೆಗಳ ಹಾಗೆ ಮಾನವನ ಜೀವನ ಪಥ. ಈ ಸಾಧನೆಯ ಹಾದಿಯಲ್ಲಿ ಸಮುದ್ರ ಸೇರುವ ತವಕ ಕೆಲವರಿಗೆ, ಸಾಧನೆಯೇ ಇಲ್ಲದೆ ಜೀವನ ಸವೆಯಿಸುವ ನೀರವ ಬದುಕು ಕೆಲವರದ್ದು, ಕೆಲವರಂತೂ ಹತ್ತರಲ್ಲಿ ಒಬ್ಬರಾಗದೆ ಮೊದಲಿಗರಾಗುವ ಹುಮ್ಮಸ್ಸು ಹೀಗೆ ಅನೇಕ ತರದ, ಸ್ತರದ ಜೀವನ ಶೈಲಿಯ ವ್ಯಕ್ತಿಗಳನ್ನು ಈ ಸಮಾಜದಲ್ಲಿ ಕಾಣುತ್ತೇವೆ. ಆದರೆ ಇದಕ್ಕೆಲ್ಲ ಅಪವಾದವೋ ಎಂಬಂತೆ ಓರ್ವ ವ್ಯಕ್ತಿ ನಮ್ಮಲ್ಲಿ, ಅವರೇ ಕಲಾವಿದ ಸಂಘಟಕ ಅಡೂರಿನ ಕೆರೆಮೂಲೆ ಶ್ರೀಧರ ರಾವ್. ಕಲೆಯ ಸರ್ವಸ್ವ. ಇನ್ನಿತರವು ಜೀವನ ಗೌಣ ಎಂದರಿತು ಅದನ್ನೇ ಹಚ್ಚಿಕೊಂಡು ಮೆಚ್ಚಿಕೊಂಡು ಅನೇಕ ಸಾಧನ ಪುರಸ್ಕಾರಗಳನ್ನು ತನ್ನ ಬಗಲಿಗೆ ಏರಿಸಿಕೊಂಡು ಇತ್ತೀಚಿನ ಕೆಲವು ದಿನಗಳಿಂದ ಜೀವನ ಪಯಣದಲ್ಲಿ ಅಂತಿಮಯಾತ್ರೆಯತ್ತ ಸುಗಮದ ಹಾದಿ ಅದೇ ಬ್ರಹ್ಮ ಸಾಕ್ಷಾತ್ಕಾರಕ್ಕೆ ಹಪಹಪಿಸುತ್ತ ಇರುವವರು. ಕೆಲವು ದಿನಗಳಿಂದ ತನ್ನ ಅನಾರೋಗ್ಯದ ಮಧ್ಯೆಯೂ ಒಂದಷ್ಟು ಕಲೆಗಾಗಿ ಕಲಾವಿದರಿಗಾಗಿ ಅನುದಿನವು ಗುಣುಗುತ್ತಾ ಇರುವವರು.

ಇತ್ತೀಚಿನವರೆಗೂ ಆರೋಗ್ಯವಂತ ಬಾಳು ಬಾಳಿ, ಎಲ್ಲರಿಗೂ ಆದರ್ಶರಾಗಿ, ಸಮಾಜದ ಹಿರಿಯರಾಗಿ ಜನತೆಗಾಗಿ, ಸಮಾಜಕ್ಕಾಗಿ ಒಂದಷ್ಟನ್ನು ಬಳುವಳಿಯಿತ್ತು. ರಾಮಚಂದ್ರಯ್ಯ ಕಾವೇರಮ್ಮ ದಂಪತಿಗಳ ಸುಪುತ್ರನಾಗಿ ಕಲಾಮಾತೆಯ ವರಪುತ್ರನಾಗಿ, ಯಕ್ಷಗಾನ ಕಲೆಯೇ ಉಸಿರಾಗುತ್ತ ಜನಾದರಣೀಯರಾಗಿ ಮೆರೆದವರು. 78 ರ ಹರೆಯದ ಇವರು (08–03–1938) ತನ್ನ ನಿಡುಗಾಲದಲ್ಲಿ ಅಡೂರು ಮಹಾಲಿಂಗೇಶ್ವರ ಯಕ್ಷಗಾನ ಕಲಾಸಂಘ ಕಟ್ಟಿ, ಹಿರಿಯರ ಪ್ರೇರೇಪಣೆಯೊಂದಿಗೆ ಸಮಾಜದ **"ಶಿವಬ್ರಾಹ್ಮಣ ಸಂಘ"** ಕಟ್ಟಿ ಬಹುಕಾಲ ಕಾರ್ಯದರ್ಶಿಯಾಗಿ, ಅಡೂರು ಶ್ರೀ ಮಹಾಲಿಂಗೇಶ್ವರ ದೇವಾಲಯದ ಅಭಿವೃದ್ಧಿಯಲ್ಲಿ ಹಗಲಿರುಳು ಶ್ರಮಿಸಿ, 15 ವರ್ಷ ಸತತವಾಗಿ ಕಾರ್ಯದರ್ಶಿಯಾಗಿ, ಸೇವಾ ಕೈಂಕರ್ಯದಲ್ಲಿ ಭಾಗಿಗಳಾಗಿ ಬಹುಜನ ಮಾನ್ಯತೆಯನ್ನು ಪಡೆದವರು. ಆಗಿನ ಮುಖ್ಯಮಂತ್ರಿಗಳಾದ ಎಸ್.ಎಂ.ಕೃಷ್ಣ ಅವರಿಂದ ಜಾನಪದ ಅಕಾಡೆಮಿ ಪ್ರಶಸ್ತಿ, ಶ್ರೀ ಎಡನೀರು ಮಹಾ ಸಂಸ್ಥಾನದಿಂದ ಸಂಮಾನ, ಬಲಿಪ ಪ್ರಶಸ್ತಿ–2005, ಶ್ರೀ ಗೋಪಾಲಕೃಷ್ಣ ಯಕ್ಷಗಾನ ಗೊಂಬೆಯಾಟ ಬಳಗದ ಸಂಮಾನ, ಬೆಳುವಾಯಿಯ ಶ್ರೀ ಯಕ್ಷದೇವ ಪ್ರಶಸ್ತಿ, ಶಿವ ಬ್ರಾಹ್ಮಣ ಸಮಾಜ ಸೇವಾ ಸಂಘ (ರಿ) ಸುಳ್ಯ, ಅಡೂರು ಗಣೇಶೋತ್ಸವ ಸಮಿತಿ, ಚೇತನಾ ಆರ್ಟ್ಸ್ & ಸ್ಪೋರ್ಟ್ಸ್ ಕ್ಲಬ್ ಅಡೂರು ಸಮಿತಿ, ಶ್ರೀ ಸುಬ್ರಹ್ಮಣ್ಯ ಸಭಾ (ರಿ) ಮಂಗಳೂರು ಹೀಗೆ ಹತ್ತು ಹಲವು ಸಂಮಾನಗಳಿಗೆ ಭಾಜನರಾದವರು ಅಡೂರು ರಾಯರು.

ಕಲಾವಿದನಾಗಿ, ಸಂಘಟಕನಾಗಿ, ನೇಪಥ್ಯದ ಕಲಾಕೃತಿಯ ಅಧ್ವರಿಯಾಗಿ, ಬಣ್ಣಗಾರಿಕೆಯ ಗಟ್ಟಿತನಕ್ಕೆ ಹೆಸರುವಾಸಿಯಾಗಿ, ತನ್ನದೇ ಶೈಲಿಯ ಅರ್ಥಗಾರಿಕೆಯಿಂದ ಜನಮಾನಸದಲ್ಲಿ ನೆಲೆನಿಂತ ಅದ್ವಿತೀಯರು. ತಮ್ಮ ಕೈಯಲ್ಲಿ ಕಲಾಕುಸುರಿಯೇ ಕುಸುಮವಾಗಿ ಅರಳಿ ಕಂಪು ಸೂಸಿ ಯಕ್ಷ ಪ್ರಪಂಚದಲ್ಲಿ ಸುವಾಸನೆ ಬೀರುವಂತೆ ಮಾಡಿದವರು. ಕಲೆಯೊಂದಿಗೆ ಬದುಕು ಕಟ್ಟಿ ಕಲಾಸಮೃದ್ಧಿಯಿಂದ ಸಂಪ್ರೀತಿಯನ್ನು ಪಡೆದು ಸತ್‌ಪ್ರಬುದ್ಧರೂ, ಸರ್ವಸಮಾರಾಧ್ಯರೂ ಆದ ಶ್ರೀಧರರಾಯರನ್ನು ಒಬ್ಬ ಕಲಾವಿದನಾಗಿ ನಾನು ಹತ್ತಿರದಿಂದ ಬಲ್ಲೆ, ಅವರಿಗೆ ಯಕ್ಷಗಾನ ಸ್ಮರಣಿಕೆ ಮಾಡುವುದೆಂದರೆ ಬಹಳ ಪ್ರೀತಿ, ಬಹಳಷ್ಟು ತಯಾರಿಕೆಯಲ್ಲಿ ನಿಷ್ಣಾತರು ಮತ್ತು ಮೊದಲಿಗರು. ಅವರಿಗೆ ಆ ಕಾಲದಿಂದ ಸಾಥ್ ನೀಡಿದವರು ದಿ| ಪ್ಯಾರ್ ನಾವುರ(ಪ್ರಭಾಕರ್ ರಾವ್ ಸುಳ್ಯ– ಬಣ್ಣಗಾರಿಕೆ), ಮತ್ತು ಮಾಂಗು (ಮಹಾಲಿಂಗ ಮಣೀಯಾಣಿ) ಇವರನ್ನು ಸದಾ ನೆನಪಿಸಿಕೊಳ್ಳುತ್ತಾರೆ ಶ್ರೀಧರರಾಯರು.

ಇವರ ಬಾಳ ಸಂಗಾತಿ ಸಹಧರ್ಮಿಣಿ ಶ್ರೀಮತಿ ಶಾಂಭವಿ ಎಸ್.ರಾವ್ ಇವರೊಂದಿಗೆ ನಾಲ್ಕು ಮಕ್ಕಳ ತುಂಬು ಸಂಸಾರ. ಜೀವನ ಸಾಗರವನ್ನು ದಾಟಿ ಮುಂದೆ ಸಾಗುತ್ತಾ ಯಶಸ್ಸನ್ನು ಕಂಡವರು ರಾಯರು. ಮನೆಗೆ ಬಂದವರನ್ನು ಆತ್ಮೀಯತೆಯಿಂದ ನೋಡಿ ಮನದಣಿಯೇ ಉಣಬಡಿಸಿ ಪರರ ಸಂತೃಪ್ತಿಯಲ್ಲೇ ತೃಪ್ತ ಜೀವನವನ್ನು ಉಂಡ ಮಹಾತ್ಮರು ತಾವು.



ನೀವೆಂತಿದ್ದರೂ ನಿಮ್ಮ ಜೀವನ ಆದರ್ಶ ನಮಗೆ ದಾರಿದೀಪ. ನಿಮ್ಮೊಳಗೆ ಅಧೀಷ್ಟವಾದ ಕಲಾ ಸರಸ್ವತಿ ಸರ್ವಾಂಗ ಸುಂದರಿಯಾದ ಸುಮಂಗಲೆಯಾಗಿ ಹರಸುವಳೆಂಬ ಭರವಸೆ ನಮ್ಮದು. ಯಕ್ಷಗಾನ ಕಲೆ ಕಮ್ಮಟ ಸತತ ಮೂರು ದಿನಗಳ ಕಾಲ ಅಡೂರಿನ ಕೆರೆಮೂಲೆಯ ಚಂದ್ರನಿವಾಸದ ಅಂಗಳದಲ್ಲಿ ಚೆಂಡೆಯ ರಿಂಗಣದೊಂದಿಗೆ ಅನುರಣಿಸಿದ ದಿನಗಳಲ್ಲಿ ಮಹಾಮೇಧಾವಿಗಳು, ವಿಮರ್ಶ ಪ್ರಪಂಚದ ಪ್ರಚಂಡರು, ವಿದ್ವನ್ಮಣಿಗಳು ಸೇರಿದಾಗ ಅನೇಕ ಹೊಸತನಕ್ಕೆ ತೆರೆದುಕೊಂಡ ವಿಷಯಕ್ಕೆ ತಾವು ಕಾರಣರಾದಿರಿ. ಕಲಾ ಸಮುದ್ರದ ಜ್ಞಾನಮಂಥನದಿಂದ ಸಮುದ್ಭವಿಸಿದ ಕಮನೀಯ ಕಲಾವಿದರು ತಾವು.

ನೀವೆಂಬಂತೆ ಬರಿದೇ ಹಾಡುವವರು, ರಾಗ ಬರುವವರು, ಕುಣಿತ ಬರುವವರು, ಬಣ್ಣ ಬಳಿಯುವವರು, ವಾಚಾಳಿಗಳು ದುಮ್ಮಿಕ್ಕಿ ಸುಧಾರಿಸಬಹುದಾದುದೆನ್ನುವ ಪುಟ್ಟ ಕಲೆಯಾಗಲಿ ಯಾ ಕ್ಷೇತ್ರವಾಗಲಿ ಯಕ್ಷಗಾನ ಅಲ್ಲ ಒಂದು ಸಮಷ್ಠಿಯ ಕಲೆ. ಗಾನ, ನೃತ್ಯ, ನರ್ತ, ವೇಷಭೂಷಣ, ಅಭಿನಯ ಮತ್ತು ಸಾಹಿತ್ಯವನ್ನು ಒಳಗೊಂಡ ಸರ್ವಾಂಗ ಸುಂದರ ಕಲೆಯೆಂದು ಎಳೆಯರಿಗೆ ಎಳೆಎಳೆಯಾಗಿ ಬೋಧಿಸುತ್ತಾ ಬಂದ ಸಜ್ಜನ ಕಲಾವಿದ ಅಡೂರು ರಾಯರು. ಕಲಾ ಸೊಬಗಿಗೆ, ಶಿಸ್ತಿಗೆ ಅಥವಾ ಒಂದು ಸಂವಿಧಾನಕ್ಕೆ ಯಾವುದೇ ರೀತಿ ತೊಡಕಾಗದಂತೆ ಹತ್ತು ಹಲವು ಚಿಂತನಾಶೀಲ ಪ್ರಯೋಗ ಪ್ರಯತ್ನಗಳನ್ನು ಅಳವಡಿಸಲು ವಿಫುಲ ಅವಕಾಶವಿರುವ ಯಕ್ಷಗಾನದಲ್ಲಿ ದುಡಿದು ಚರಿತ್ರೆಯಾಗ ಹೊರಟ ಅಡೂರು ಶ್ರೀಧರರಾಯರಿಗೆ ನಮೋನಮಃ.

ರಾಯರೇ, ಸತ್ಯ ಸೌಂದರ್ಯಗಳ ಸಂಗಮವೇ ಪರಮಸಿದ್ಧಿ ಎನ್ನುವಂಥಹ ಆಶಯದೊಂದಿಗೆ ಸತ್‌ಕ್ರಿಯೆಯಿಂದ ಸದಾಂಶುವನ್ನು, ಮುಪ್ಪಿನಿಂದ ಚಿದಾಂಶುವನ್ನು, ಭಾವದಿಂದ ಆನಂದಾಂಶುವನ್ನು ಅನುಭವಿಸುತ್ತಾ ಇನ್ನುಳಿದ ಆಯುಷ್ಯದ ನಿಮ್ಮ ಬಾಳ ನೌಕೆಯು ದಡ ಸೇರಿ ಮೋಕ್ಷಗಾಮಿಗಳಾಗಿ ತಮಗೆ ಶಾಶ್ವತಲೋಕ ಪ್ರಾಪ್ತಿಯಾಗಲಿ ಎಂಬ ಆಶಯ ನಮ್ಮದು.

**ಕಲಾವಿದ ಎಂ.ದೇವಾನಂದ ಭಟ್, ಬೆಳುವಾಯಿ**

# ಸಾಹಿತಿ ಸಾವಿತ್ರಿ ಮನೋಹರ್‌ಗೆ ಸನ್ಮಾನ



"ಪುಟ್ಟ ಹಳ್ಳಿಯಲ್ಲಿ ಹುಟ್ಟಿ ಬೆಳೆದು ಬೆಟ್ಟದಷ್ಟು ಸಾಧನೆ ಮಾಡಿರುವ ಶ್ರೀಮತಿ ಸಾವಿತ್ರಿ ಮನೋಹರ್ ಕಳಸ ಇವರನ್ನು ಸನ್ಮಾನಿಸುವ ಮೂಲಕ ನಮ್ಮ ಕನ್ನಡ ಸಾಹಿತ್ಯ ಪರಿಷತ್ತು ತನ್ನ ಗೌರವ ಹೆಚ್ಚಿಸಿಕೊಂಡಿದೆ" ಎಂದು ಮೂಡಿಗೆರೆ ತಾಲೂಕು ಕಳಸ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಸ್ಥಾನ ವಹಿಸಿದ ಗೊರಸು ಕೂಡಿಗೆ ಶ್ರೀ ಭಾಸ್ಕರರವರು ನುಡಿದರು.

ಲೇಖಕಿ, ಸಾಹಿತಿ ಶ್ರೀಮತಿ ಸಾವಿತ್ರಿ ಮನೋಹರ್‌ರವರು ಸಾಹಿತ್ಯ ಸಮ್ಮೇಳನದ ಕವಿಗೋಷ್ಠಿಯ ಅಧ್ಯಕ್ಷತೆ ವಹಿಸಿ ಕವನ ಹೇಗಿರಬೇಕು ಎಂಬುದನ್ನು ತಿಳಿಸುತ್ತಾ, ಹದಿನಾರು ಕವಿಗಳ ಕವನಗಳ ವಿಮರ್ಶೆ–ಪ್ರಶಂಸೆ ಮಾಡಿದರು. ತಾನು ಹುಟ್ಟಿ ಬೆಳೆದು ಪುಟ್ಟ ಪುಟ್ಟ ಹೆಜ್ಜೆ ಇಟ್ಟು ನಡೆದಾಡಿದ ತಾಯ್ನೆಲದ ಸವಿನೆನಪುಗಳೊಂದಿಗೆ ಸಾಹಿತ್ಯ ಸಮ್ಮೇಳನದ ಬಗೆಗೆ ಆಶು ಕವನ ರಚಿಸಿ ಕಿಕ್ಕಿರಿದು ಸೇರಿದ ಹಿರಿಯ ಕಿರಿಯ ಕನ್ನಡಿಗರಿಂದ ಕಿವಿಗಡಚಿಕ್ಕುವ ಚಪ್ಪಾಳೆ ಗಿಟ್ಟಿಸಿದರು.

ಸಾಹಿತ್ಯ ಪರಿಷತ್ತು ಅಧ್ಯಕ್ಷ ಶ್ರೀ ಕರೀಂ ಸಾಹೇಬ್, ದಾನಿಗಳೂ ಸಾಹಿತ್ಯ ಪೋಷಕರೂ ಆದ ಶ್ರೀ ಹೆಚ್. ರಾಮಚಂದ್ರ ಹೆಬ್ಬಾರ್, ಲೇಖಕಿ ಮಮ್ತಾಜ್ ಬೇಗಮ್, ಮಾಜಿ ಅಧ್ಯಕ್ಷ ಶ್ರೀ ಅ.ರಾ.ರಾಧಾಕೃಷ್ಣ ಹಾಗೂ ಸಮ್ಮೇಳನಾಧ್ಯಕ್ಷ ಶ್ರೀ ಭಾಸ್ಕರರಾವ್‌ರವರು ಶ್ರೀಮತಿ ಸಾವಿತ್ರಿ ಮನೋಹರ್‌ರವರನ್ನು ಜೊತೆಯಾಗಿ ಸನ್ಮಾನಿಸಿದರು. ಶ್ರೀರಾಮಚಂದ್ರ ಹೆಬ್ಬಾರ ಸ್ವಾಗತಿಸಿ ಧನ್ಯವಾದ ಸಲ್ಲಿಸಿದರು

## ವೈದ್ಯಕೀಯ ವೇದಿಕೆ–ಆರೋಗ್ಯ ಮಾಹಿತಿ

ಡಾ|| ವೈ. ಸುದರ್ಶನ ರಾವ್



**ಪ್ರಶ್ನೆ: ಹುಟ್ಟಿನಿಂದಲೇ ಬರುವ ಖಾಯಿಲೆಗಳು**

ಅನೇಕ ಖಾಯಿಲೆಗಳು ಹುಟ್ಟಿನಿಂದಲೆ ಇರುತ್ತವೆ. ಭ್ರೂಣದ ಬೆಳವಣಿಗೆಯ ಯಾವುದೋ ಒಂದು ಹಂತದಲ್ಲಾಗುವ ತಪ್ಪಿನಿಂದಾಗಿ ಈ ಖಾಯಿಲೆಗಳು ಬರುತ್ತವೆ. ಇವಕ್ಕೆ ಜನ್ಮದಾರಭ್ಯ ಇರುವ ಖಾಯಿಲೆಗಳು (congenital diseases) ಎಂದು ಹೇಳುತ್ತೇವೆ. ಇವುಗಳಲ್ಲಿ ಎರಡು ವಿಧ. ಒಂದು ಯಾವುದೇ ಒಂದು ಅಂಗದ ರಚನೆಯಲ್ಲಿ ಕಾಣುವ ಊನತೆ, ಎರಡನೆಯದು ಯಾವುದೇ ಅಂಗದ ಕಾರ್ಯದಲ್ಲಿ ಕಂಡುಬರುವ ನ್ಯೂನತೆ. ಅಂಗ ಊನತೆ ಅಂದರೆ ಅಂಗ ಇಲ್ಲದೆ ಇರಬಹುದು (ಉದಾ:ಕಿಡ್ನಿ ಇಲ್ಲದಿರುವುದು), ಇರಬೇಕಾದಲ್ಲಿ ಇರದೆ ಬೇರೆಲ್ಲಾದರೂ ಇರಬಹುದು (ಉದಾ: ಹೊಟ್ಟೆಯಲ್ಲಿರಬೇಕಾದ ಕಿಡ್ನಿ ಎದೆಗೂಡಿನಲ್ಲಿರುವುದು), ಒಂದಿರಬೇಕಾದದ್ದು ಎರಡು ಮೂರು ಇರಬಹುದು,ಅದರ ಕೆಲವು ಭಾಗಗಳೇ ನಾಪತ್ತೆಯಾಗಿರಬಹುದು. ಹೀಗೆ ಯಾವುದೇ ಅಂಗ ರಚನೆಯಲ್ಲೇ ದೋಷ ಕಂಡುಬಂದಾಗ ಆ ಅಂಗವು ಸಮರ್ಪಕವಾಗಿ ಕಾರ್ಯವೆಸಗಲು ಸಾಧ್ಯವಾಗದೇ ಹೋಗಬಹುದು.

ಇನ್ನು ಕೆಲವೊಮ್ಮೆ ಅಂಗದ ರಚನೆ ಮೇಲ್ನೋಟಕ್ಕೆ ಸರಿಯಾಗಿದ್ದರೂ ಅದರ ಕಾರ್ಯಕ್ಷಮತೆಯಲ್ಲಿ ನ್ಯೂನತೆ ಇರಬಹುದು. ಅಂಗದ ಸೂಕ್ಷ್ಮರಚನೆಯಲ್ಲಿ ದೋಷವಿರುವುದು, ದೇಹಕ್ಕೆ ಅಗತ್ಯವಿರುವ ಕಿಣ್ವಗಳನ್ನು ಹಾಗೂ ಹಾರ್ಮೋನುಗಳನ್ನು ತಯಾರಿಸಲು ಅಸಮರ್ಥವಾಗುವುದು (metabolic errors) ಇದಕ್ಕೆ ಉದಾಹರಣೆಗಳು


ಅನುವಂಶಿಕವಾದ ಹಾಗೂ ಮ್ಯುಟೇಶನ್‌ನಿಂದಾದ ಜೀನ್‌ಗಳಲ್ಲಿರುವ ದೋಷಗಳು, ಗರ್ಭವತಿಗೆ ಇನ್ಫೆಕ್ಷನ್ ಆಗಿರುವುದು, ಗರ್ಭವತಿ ತಾಯಿಯು ಸೇವಿಸಿದ ಕೆಲವು ಔಷಧಗಳು, ಗರ್ಭಿಣಿಯು ವಿಕಿರಣಗಳ ಸಂಪರ್ಕಕ್ಕೆ ಬಂದಿರುವುದು, ಗರ್ಭವತಿಗೆ ಮದ್ಯಪಾನ ಹಾಗೂ ಧೂಮಪಾನದ ಚಟ, ಗರ್ಭಿಣಿಗೆ ಪೌಷ್ಟಿಕ ಆಹಾರ, ವಿಟಮಿನ್ (ಫೋಲಿಕ್ ಆಸಿಡ್)ನ ಹಾಗೂ ಅಯೋಡಿನ್ ಕೊರತೆ, ಅತಿ ಸಣ್ಣ ಪ್ರಾಯದ ಹಾಗೂ ಮೂವತ್ತು ಪ್ರಾಯ ಮೀರಿದ ಗರ್ಭಿಣಿ, ಅದೇ ರೀತಿ ಅತೀ ಸಣ್ಣ ಪ್ರಾಯದ ಹಾಗೂ ಮುದಿ ತಂದೆ, ಇವಿಷ್ಟು ಜನ್ಮದಾರಭ್ಯ ಬರುವ ಕಾಯಿಲೆಗಳಿಗೆ ಕಾರಣಗಳು.

ಈ ಖಾಯಿಲೆಗಳು ಹುಟ್ಟಿದ ಕೂಡಲೆ ಪ್ರಕಟವಾಗಬಹುದು (ಉದಾ:ಕೈಕಾಲು ಹಾಗೂ ದೇಹದ ಹೊರಭಾಗಗಳ ಕಣ್ಣಿಗೆ ಕಾಣಿಸುವ ಅಂಗಗಳ ಊನತೆ) ಅಥವಾ ಸ್ವಲ್ಪ ಪ್ರಾಯ ಕಳೆದ ಮೇಲೆ ಪ್ರಕಟವಾಗಬಹುದು (ಒಳ ಅಂಗಗಳು) ಹಾಗೂ ಕೆಲವೊಮ್ಮೆ ಹೊರ ಅಂಗವಾದರೂ ಹುಟ್ಟಿದ ಕೂಡಲೇ ಪತ್ತೆ ಹಚ್ಚಲು ಸಾಧ್ಯವಾಗದಿರಬಹುದು (ಉದಾ ಶ್ರವಣದೋಷ). ಯಾವುದಾರೊಂದು ಅಂಗದ ಊನತೆ ಪತ್ತೆಯಾದಲ್ಲಿ ಕೂಲಂಕುಷವಾಗಿ ತಪಾಸಣೆ ನಡೆಸಿದಾಗ ಇನ್ನೂ ಕೆಲವು ಅಂಗಗಳ ಊನತೆ ಇರುವ ಸಾಧ್ಯತೆ ಇರುತ್ತದೆ. ಕೆಲವು ಖಾಯಿಲೆಗಳಲ್ಲಿ ಹುಟ್ಟುವ ಇನ್ನೊಂದು ಮಗುವೂ ಇಂತಹದೇ ಖಾಯಿಲೆ ಪಡೆಯುವ ಸಾಧ್ಯತೆ ಇರುತ್ತದೆ ಹಾಗಾಗಿ ಈ ಬಗ್ಗೆ ತಜ್ಞರ ಸಲಹೆ ಅಗತ್ಯ. ಜನ್ಮದಾರಭ್ಯ ಬಂದ ಖಾಯಿಲೆಗಳನ್ನು ಗುಣಪಡಿಸಲು ಸಾಧ್ಯವಿಲ್ಲ ಎಂಬ ಮಾತು ಸುಳ್ಳು. ಅನೇಕ ಬಾರಿ ಇಂತಹಾ ಖಾಯಿಲೆಗಳನ್ನು ಗುಣಪಡಿಸಲು ಸಾಧ್ಯವಿದೆ. ಕೆಲವು ಸಂದರ್ಭದಲ್ಲಿ ಇಂತಹಾ ಊನತೆ/ನ್ಯೂನತೆಗಳು ಹೆಸರಿಗೆ ಮಾತ್ರಾ ಇದ್ದು ಅದರಿಂದ ದೇಹಕ್ಕೇನೂ ತೊಂದರೆಯಾಗುವುದಿಲ್ಲ

ನಮ್ಮ ದೇಶದಲ್ಲಿ ಇಪ್ಪತ್ತು ವಾರಗಳ ಗರ್ಭದ ತನಕ ಭ್ರೂಣದಲ್ಲೇನಾದರೂ ಊನತೆ/ನ್ಯೂನತೆ ಪತ್ತೆಯಾದಲ್ಲಿ ಗರ್ಭಪಾತ ಮಾಡಿಸಿಕೊಳ್ಳಲು ಕಾನೂನು ಪ್ರಕಾರ ಅವಕಾಶವಿದೆ. ಹಾಗಾಗಿ ಎಲ್ಲಾ ಗರ್ಭಿಣಿಯರು ಗರ್ಭಧರಿಸಿದ ಹದಿನಾರರಿಂದ ಇಪ್ಪತ್ತು ವಾರಗಳೊಳಗೆ ಅಲ್ಟ್ರಾಸೌಂಡ್ ತಪಾಸಣೆಗೊಳಗಾಗುವ ಮೂಲಕ ಹೆಚ್ಚಿನ ಇಂತಹಾ ಊನತೆಗಳನ್ನು ಪತ್ತೆಹಚ್ಚಿಕೊಳ್ಳಲು ಸಾಧ್ಯವಿದೆ. ಒಂದು ವೇಳೆ ಸರಿಪಡಿಸಲಾಗದ ಊನತೆಗಳಿದ್ದರೆ ಗರ್ಭಪಾತ ಮಾಡಿಸಿಕೊಳ್ಳಬಹುದು. ಇಂತಹಾ ಊನತೆ/ನ್ಯೂನತೆಗಳಿರುವ ಮಕ್ಕಳಿಗೆ ಜನ್ಮ ನೀಡುವ ಸಾಧ್ಯತೆ ಹೆಚ್ಚಿರುವ ತಾಯಂದಿರು ಅಲ್ಟ್ರಾಸೌಂಡ್ ತಪಾಸಣೆ ಮಾತ್ರವಲ್ಲದೆ ಕೆಲವು ರಕ್ತಪರೀಕ್ಷೆ ಹಾಗೂ ಭ್ರೂಣದ ನೀರಿನ ತಪಾಸಣೆ (amniocentesis) ಮಾಡಿಕೊಳ್ಳುವ ಮೂಲಕ ಹುಟ್ಟುವ ಮಗುವು ಆರೋಗ್ಯವಾಗಿರುವುದೆಂದು ಖಚಿತ ಪಡಿಸಿಕೊಳ್ಳಬಹುದು.

**ಆರೋಗ್ಯ ಮಾಹಿತಿಯ ಬಗ್ಗೆ ಪ್ರಶ್ನೆಗಳನ್ನು ಎಸ್.ಎಮ್.ಎಸ್.ಮೂಲಕವೂ ತಿಳಿಸಬಹುದು. ಸಂಚಾರಿ ದೂರವಾಣಿ ನಂ. : 9845136322**

## ಕನ್ನಡ ಕವಿಕಾವ್ಯ ಪರಿಚಯ–೧೧ : ಷಟ್ಪದಿ ಕವಿ ರಾಘವಾಂಕ–4



– ಹರಿದಾಸ ಮ.ನಾ.ಹೆಬ್ಬಾರ<br>ಎಂ.ಎ., ಬಿ.ಎಡ್.

**ಸೋಮನಾಥ ಚರಿತೆ :**

ಒಮ್ಮೆ ಕೈಲಾಸದ ಶಿವನ ಸಭೆಗೆ ನಾರದರ ಆಗಮನವಾಗುತ್ತದೆ. ನಾರದರೊಂದಿಗೆ ಉಭಯ ಕುಶಲೋಪರಿ ಮಾತಾಡುತ್ತಾ ಈಶ್ವರನು ಭೂಲೋಕದ ವಿಶೇಷಗಳನ್ನು ಕುರಿತು ವಿಚಾರಿಸಿದನು. ಆಗ ನಾರದರು 'ಭೂಮಿಯಲ್ಲಿ ಪುಲಿಗೆರೆ ಎಂಬ ಊರಿನಲ್ಲಿ ಜೈನರ ಸಂಖ್ಯೆ ಹೆಚ್ಚಿ ಅಲ್ಲಿರುವ ಶಿವಾಲಯವನ್ನು ಮುಚ್ಚಿ, ಈಶ್ವರನ ಪೂಜೆ–ನೈವೇದ್ಯ ಇತ್ಯಾದಿಗಳನ್ನೆಲ್ಲಾ ಕೆಡಿಸಿ, ಸೊಪ್ಪು–ಸದೆಗಳನ್ನು ದೇವಾಲಯದ ಒಳಗೆ ರಾಶಿ ಹಾಕಿ, ತೀರ್ಥ–ಪ್ರಸಾದಗಳನ್ನೊಲ್ಲಿದೆ ಅವುಗಳನ್ನು ನೆಲದಲ್ಲಿ ಹೂತು ಹಾಕಿ, ದುರ್ನೀತಿಯಲ್ಲಿ ನಡೆದು, ಶಿವನಿಗೆ ಅಪಮಾನ ಮಾಡುತ್ತಿದ್ದಾರೆಂದು ಹೇಳಿದರು. ಇದನ್ನು ಕೇಳಿದ ಶಿವನು ಅಲ್ಲಿನ ಜನರಿಗೆ ಯೋಗ್ಯ ಮಾರ್ಗದರ್ಶನವನ್ನು ನೀಡಿ, ಅವರನ್ನು ಶಿವಾಚಾರ ಸಂಪನ್ನರನ್ನಾಗಿಸುವ ಉದ್ದೇಶದಿಂದ ತನ್ನ ಹಿಂದೆಯೇ ನಿಂತಿದ್ದ ಆದಿಗಣನಾಥನನ್ನು ಕರೆದು ಅಲ್ಲಿಗೆ (ಪುಲಿಗೆರೆಗೆ) ಹೋಗುವಂತೆ ಕಳುಹಿಸಿದನು. ಅವನು ಅದರಂತೆ ಪಶ್ಚಿಮ ಸಮುದ್ರ ತೀರದಲ್ಲಿದ್ದ ಸೌರಾಷ್ಟ್ರಪುರ (ಈಗಿನ ಗುಜರಾತ್)ದಲ್ಲಿ ಹರದತ್ತ ಮತ್ತು ಪುಣ್ಯವತಿ ಎಂಬವರ ಹೊಟ್ಟೆಯಲ್ಲಿ ಹುಟ್ಟಿದನು. ಬಾಲಕನಿಗೆ ಆದಯ್ಯನೆಂದು ಹೆಸರಿಡಲಾಯಿತು. ಪ್ರಾಯ ಪ್ರಬುದ್ಧನಾದ ಮೇಲೆ ಅವನು ಒಂದು ದಿನ ತೆಂಕನಾಡಿಗೆ ವ್ಯಾಪಾರಕ್ಕೆಂದು ಹೊರಟು 'ಚಂದ್ರಾದಿತ್ಯ ಚಕ್ರೇಶ'ನಿದ್ದ ಹುಲಿಗೆರೆ ಅಥವಾ ಪುಲಿಗೆರೆಗೆ ಬಂದನು ಅಲ್ಲಿ ಆತನಿಗೆ ಇಳಿದುಕೊಳ್ಳುವುದಕ್ಕೆ ಭಕ್ತರ (ಅಂದರೆ ಶೈವರ) ಮನೆಯೊಂದೂ ಇರಲಿಲ್ಲ. ಇಡಿಯ ಊರೇ ಜೈನರ ಕೇರಿಯಾಗಿತ್ತು. ಆದರೆ ಬಸದಿಗಳ ಮಧ್ಯೆ ಒಂದು ಶಿವಾಲಯವಿತ್ತು. ಅಲ್ಲಿಗೆ ಹೋದನು. ಅಲ್ಲಿಯೇ ಇದ್ದುಕೊಂಡು ಶಿವನನ್ನು ಅರ್ಚಿಸುತ್ತಾ ಕಾಲಕಳೆಯ ತೊಡಗಿದನು.

ಒಂದು ದಿನ ಸಾಯಂಕಾಲ ಆ ಊರಿನಲ್ಲಿ ತಿರುಗಾಡುತ್ತಾ ಪದ್ಮಾವತಿ ಎಂಬಾಕೆಯನ್ನು ಕಂಡು ಆಕೆಯಲ್ಲಿ ಅನುರಕ್ತನಾಗಿ ಅವಳ ಮನೆಯಲ್ಲಿಯೇ ಒಂದೆರಡು ತಿಂಗಳು ಇದ್ದು ಬಿಟ್ಟನು. ಪ್ರಣಯದ ಭರ (ಕಾವು)ವು ಸ್ವಲ್ಪ ಕಡಿಮೆಯಾದ ಮೇಲೆ ಆಕೆ ಯಾರು, ಏನು ಎಂದು ವಿಚಾರಿಸಿದನು. ಆಗ ಅವಳು ತಾನು ಪಾರಿಸ ಶೆಟ್ಟಿ ಎಂಬವನ ಒಬ್ಬಳೇ ಮಗಳೆಂದೂ ತನ್ನದು ಜೈನ ಮತವೆಂದೂ ಹೇಳಿದಳು. ಇದನ್ನು ಕೇಳಿದ ಆದಯ್ಯನಿಗೆ ಹಾವನ್ನು ಮೆಟ್ಟಿದಂತಾಯಿತು. ಇವನ ಸನ್ನಿಧಿಯಿಂದ, ಶಿವನಿಂದ ಪ್ರೇರಿತನಾಗಿ ಪುಲಿಗೆರೆಯ ಜನರನ್ನು ಶೈವರನ್ನಾಗಿ ಪರಿವರ್ತಿಸುತ್ತೇನೆಂದು ಹೊರಟು ಬಂದಿದ್ದ ತಾನು ಇಲ್ಲಿ 'ಭವಿ' (ಜೈನ ಸ್ತ್ರೀ)ಯನ್ನು ಕೂಡಿದ್ದು ತಪ್ಪೆಂದು ಗೊತ್ತಾಗಿ, ತಾನು ಶೈವನೆಂಬುದನ್ನು ಆಕೆಯಲ್ಲಿ ತಿಳಿಸಿ, ಊರಿಗೆ ಹೊರಟು ಹೋಗುತ್ತೇನೆಂದು ಆಕೆಯೊಂದಿಗೆ ನೆಪವನ್ನು ಹೇಳಿ ಅಲ್ಲಿಂದ ಹೊರಟೇ ಬಿಟ್ಟನು. ಆದರೆ ಆಕೆ ಮಾತ್ರ ಅವನನ್ನು ಹೋಗಗೊಡಲಿಲ್ಲ. ಕೊನೆಗೆ ಆಕೆಯು ಹೋಜೇಶ್ವರದ ಹಿರಿಯ ಆಚಾರ್ಯರಿಂದ ಶಿವದೀಕ್ಷೆಯನ್ನು ತೆಗೆದುಕೊಂಡು ಶೈವಳಾದಳು. ಇದನ್ನು ಕೇಳಿ ಅವಳ ತಂದೆಯು ಮಗಳ ಮೇಲೆ ಕೋಪಿಸಿಕೊಂಡನು. ಆಗ ಆಕೆಯು ತನ್ನ ತಂದೆಯನ್ನು ಕುರಿತು, 'ನೀನಾರು? ನಾನಾರು? ನನಗೆ ನನ್ನ ಇನಿಯನೇ ಸರ್ವಸ್ವವಲ್ಲದೆ ಬೇರಾರಿಲ್ಲ' ಎಂದು ನಿರ್ದಾಕ್ಷಿಣ್ಯದಿಂದ ತಂದೆಯನ್ನೇ ಜರೆದಳು. ಕೊನೆಗೆ ತಂದೆಯೇ ಸಮಾಧಾನ ಮಾಡಿಕೊಂಡು, ಇದ್ದ ಒಬ್ಬ ಮಗಳು ಕೈಬಿಟ್ಟು ಹೋದಾಳೆಂದು, 'ಯಾವ ದೇವರನ್ನಾದರೂ ಪೂಜಿಸಿಕೋ, ಎಲ್ಲಾದರೂ ಸುಖವಾಗಿ ಇರು' ಎಂದು ಸುಮ್ಮನಾದನು. ಒಂದು ದಿನ ಆದಯ್ಯನು ಉದ್ಯಾನವನದಲ್ಲಿ ಸಂಚರಿಸುತ್ತಿರಲು, ಅಲ್ಲಿ ಕೆರೆಯ ಕಟ್ಟೆಯ ಮೇಲೆ ಐವರು ಶಿವಭಕ್ತರು ಬಂದರು. ಅವರು ತಾವು ಸೇತುಯಾತ್ರೆಯಿಂದ ಬರುತ್ತ ಐದು ಉಪವಾಸ ಮಾಡಿ ಬಂದೆವೆಂದೂ ತಮ್ಮನ್ನು ಇಲ್ಲಿ ಯಾರೂ ಕೇಳದ್ದರಿಂದ ಈ ಹುಲಿಗೆರೆಯು ಹುಲಿಯೂರಾಯಿತೆಂದೂ ಹೇಳಿದ್ದರು. ಇದನ್ನು ಕೇಳಿ ಆದಯ್ಯನು ಬೇಸರಗೊಂಡು, ತನ್ನ ಇಬ್ಬರು ಸ್ನೇಹಿತರನ್ನು ಅವರೊಂದಿಗೆ ಕೂರಿಸಿ, ತಾನು ಮನೆಗೆ ಬಂದು ಹೆಂಡತಿಗೆ ಈ ವೃತ್ತಾಂತವನ್ನು ಹೇಳಿ ಎಲ್ಲರಿಗೂ ಅಡುಗೆ ಮಾಡುವಂತೆ ತಿಳಿಸಿ, ತಾನು ಬಿಟ್ಟಿದ್ದ ಶಿವಭಕ್ತರನ್ನು ಕರೆತರುವುದಕ್ಕೆ ಹೋದನು.

(ಮುಂದುವರಿಯುವುದು)

## ಉಡುಪಿ ಕುಂಜಿಬೆಟ್ಟು ಶ್ರೀಶಾರದಾ ಮಂಟಪದಲ್ಲಿ ಸಾಮೂಹಿಕ ಶ್ರೀ ದುರ್ಗಾನಮಸ್ಕಾರ ಪೂಜೆ

ತಾ.22–03–2015ನೇ ಆದಿತ್ಯವಾರ ಶ್ರೀಶಾರದಾ ಮಂಟಪದಲ್ಲಿ ಸಾಮೂಹಿಕ ದುರ್ಗಾನಮಸ್ಕಾರ ಪೂಜೆಯು ಸಂಪನ್ನ ಗೊಂಡಿತು. ಸಂಜೆ ಗಂಟೆ 5–00ರಿಂದ ಶ್ರೀ ನಾಗಭೂಷಣ ಶಾಸ್ತ್ರಿಗಳ ನೇತೃತ್ವದಲ್ಲಿ ದೀಪವಿಟ್ಟು, ಮಂಡಲ ರಚಿಸಿ ಪೂಜೆಯ ಶುಭಾರಂಭವಾಯಿತು. ಪೂಜಾ ಕರ್ತೃಗಳಾಗಿ ಕಟಪಾಡಿ ಶ್ರೀ ಉಮೇಶ್ ರಾವ್ ಮತ್ತು ಶ್ರೀಮತಿ ಪ್ರಜ್ವಲಾ ದಂಪತಿಗಳು ಸಹಕರಿಸಿದರು. ಸಮಾಜದ ಸ್ವಾಧ್ಯಾಯ ತಂಡದವರಿಂದ ದುರ್ಗಾ ಸಪ್ತಶತೀ ಪಾರಾಯಣ ನಡೆಯಿತು. ಶ್ರೀಶಾರದಾ ದೇವಸ್ಥಾನದಲ್ಲಿ ಮಹಿಳೆಯರಿಂದ ಸಾಮೂಹಿಕ ಭಜನೆ, ಲಲಿತಾ ಸಹಸ್ರನಾಮ ಪಾರಾಯಣ, ಅಷ್ಟೋತ್ತರ ಕುಂಕುಮಾರ್ಚನೆ ನಡೆದವು.

**ಸಾಮೂಹಿಕ ಶ್ರೀ ದುರ್ಗಾನಮಸ್ಕಾರ ಪೂಜೆಯ ಶುಭ ಸಂದರ್ಭದಲ್ಲಿ ಶ್ರೀಶಾರದಾ ದೇವಿಗೆ ಆಕರ್ಷಕವಾದ ಬೆಳ್ಳಿಯ ಕಿರೀಟವನ್ನು ಸಂಘದ ಅಧ್ಯಕ್ಷರಾದ ಶ್ರೀ ಪ್ರಫುಲ್ಲಚಂದ್ರ ರಾವ್ ಹಾಗೂ ಶ್ರೀಮತಿ ಪೂರ್ಣಿಮಾ ದಂಪತಿಗಳು ಅರ್ಪಿಸಿದರು.**

ಸೇವಾ ಕರ್ತೃಗಳಿಂದ ಪೂಜಾ ಸಂಕಲ್ಪ ಮುಗಿದು ರಾತ್ರಿ 8–00 ಗಂಟೆಗೆ ಮಹಾಪೂಜೆ ನೆರವೇರಿತು. ತೀರ್ಥ ಪ್ರಸಾದ ವಿತರಣೆ ಬಳಿಕ ಭೋಜನ ಪ್ರಸಾದ ನಡೆಯಿತು. ಈ ಸಾಮೂಹಿಕ ಪೂಜಾ ಕಾರ್ಯಕ್ರಮದಲ್ಲಿ ಸಮಾಜ ಬಾಂಧವರು ಹಾಗೂ ಪರಿಸರದ ಭಕ್ತ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಸೇವೆಯ ಧನ್ಯತೆಯನ್ನು ಪಡೆದರು.

## ಮಾಂಗಲ್ಯಂ ತಂತುನಾನೇನ ....

ಬೆಂಗಳೂರಿನಲ್ಲಿ ವಾಸ್ತವ್ಯದಲ್ಲಿರುವ ಡಾ। ಉಷಾರಾವ್ ಮತ್ತು ಡಾ। ಅಡೂರು ಭಾಸ್ಕರ ರಾವ್ ಇವರ ಪುತ್ರ **ಡಾ। ಅಡೂರು ಗುರುಚರಣ್** ಹಾಗೂ ಶ್ರೀಮತಿ ಮಹಾಲಕ್ಷ್ಮಿ ಮತ್ತು ಶ್ರೀ ಕೆ ಶೇಷಾದ್ರಿಯವರ ಪುತ್ರಿ **ಡಾ। ಜಯಸ್ವಾತಿ** ಇವರ ವಿವಾಹವು ದಿನಾಂಕ 26-03-2015ರಂದು ಬೆಂಗಳೂರು ಬನ್ನೇರುಘಟ್ಟದ ಶ್ರೀ ಮೀನಾಕ್ಷಿ ಮಹಲ್‌ನಲ್ಲಿ ನೆರವೇರಿತು.

★★★ ★★★

ಶ್ರೀಮತಿ ಅನುರಾಧಾ ಮತ್ತು ಶ್ರೀ ಬೆಳ್ಳಣ್ ಸುರೇಶ್‌ರಾಯರ ಪುತ್ರ **ಪ್ರೀತಮ್** ಹಾಗೂ ಶ್ರೀಮತಿ ಪ್ರೇಮಲತಾ ಮತ್ತು ಶ್ರೀ ಗುಂಡ್ಮಿ ಗಣೇಶ್‌ಮೂರ್ತಿ ಹೆಬ್ಬಾರರ ಪುತ್ರಿ **ಅರ್ಪಿತಾ** ಇವರ ವಿವಾಹವು ದಿನಾಂಕ 06-04-2015 ರಂದು ಸಾಲಿಗ್ರಾಮದ ಶ್ರೀ ಗಿರಿಜಾ ಕಲ್ಯಾಣ ಮಂಟಪದಲ್ಲಿ ನೆರವೇರಿತು.

★★★ ★★★

ಶ್ರೀಮತಿ ಗೀತಾ ಎನ್. ರಾವ್ ಮತ್ತು ಶ್ರೀ ನಾಗೇಂದ್ರ ರಾವ್ ಕೆ. ಇವರ ಪುತ್ರ **ನಿತಿನ್** ಹಾಗೂ ಬಾರಕೂರು ಶ್ರೀಮತಿ ಪ್ರೇಮಲತಾ ಮತ್ತು ಶ್ರೀ ಯು.ಆರ್. ಶ್ರೀಧರ ರಾವ್ ಇವರ ಪುತ್ರಿ **ಅಖಿಲಾ** ಇವರ ವಿವಾಹವು ದಿನಾಂಕ 16-03-2015ರಂದು ಉಡುಪಿ ಕುಂಜಿಬೆಟ್ಟು "ಶ್ರೀ ಶಾರದಾ ಮಂಟಪ"ದಲ್ಲಿ ನೆರವೇರಿತು.

★★★ ★★★

ಶ್ರೀಮತಿ ಸ್ಮಿತಾ ಮತ್ತು ಶ್ರೀ ಮಕರಂದ ದೇಸಾಯಿ ಇವರ ಪುತ್ರ **ಆದಿತ್ಯ** ಹಾಗೂ ಮೈಸೂರಿನಲ್ಲಿ ಇರುವ ಶ್ರೀಮತಿ ಕೆ.ಶಶಿಕಲಾ ಮತ್ತು ಕಟಪಾಡಿ ಲಕ್ಷ್ಮೀನಾರಾಯಣ ರಾವ್ ಇವರ ಪುತ್ರಿ **ಪ್ರಶಾಲಿ** ಇವರ ವಿವಾಹವು ದಿನಾಂಕ 06-04-2015ರಂದು ಮೈಸೂರಿನ ಕುವೆಂಪುನಗರದ ಶ್ರೀ ಬಂದಂತಮ್ಮ ಕಾಳಮ್ಮ ಸಮುದಾಯ ಭವನದಲ್ಲಿ ನೆರವೇರಿತು.

## ಬ್ರಹ್ಮೋಪದೇಶ

**ಚಿ। ವಿಖ್ಯಾತ್**

ಅಜ್ಜಾವರದ ಶ್ರೀಮತಿ ಜ್ಯೋತಿಕಲಾ ಮತ್ತು ಶ್ರೀ ವೀರಕೇಸರಿಯು ಪುತ್ರ ಚಿ। ವಿಖ್ಯಾತ್‌ನ ಬ್ರಹ್ಮೋಪದೇಶವು ದಿನಾಂಕ 13-04-2015 ರಂದು ಸುಳ್ಯದ ಶಿವಕೃಪಾ ಕಲಾಮಂದಿರ ದಲ್ಲಿ ಜರುಗಿತು.

## ವಿಳಾಸ ಬದಲಾವಣೆ

**ಕೆ. ಗೋವಿಂದರಾವ್**

ನಿವೃತ್ತ ಶಿಕ್ಷಕ, ಪುತ್ತೂರು ತಾಲೂಕು. ದ.ಕ. ಅಂಚೆ ಕಡಬ-574221.

## ಮೇಷ ಮಾಸದ ವಿಶೇಷ ದಿನಗಳು

| | |
|---|---|
| 14-04-2015 | ಮೇಷ ಸಂಕ್ರಮಣ ಅಶ್ವಿನೀ ನಕ್ಷತ್ರಾರಂಭ |
| 15-04-2015 | ಸೌರ ಯುಗಾದಿ, ಸರ್ವೈಕಾದಶೀ |
| 16-04-2015 | ಪ್ರದೋಷಃ, |
| 18-04-2015 | ಅಮವಾಸ್ಯಾ, |
| 21-04-2015 | ಅಕ್ಷಯ ತೃತೀಯಾ |
| 27-04-2015 | ಭರಣೀ ನಕ್ಷತ್ರಾರಂಭ |
| 29-04-2015 | ಸರ್ವೈಕಾದಶೀ, |
| 01-05-2015 | ಪ್ರದೋಷಃ |
| 04-05-2015 | ಪೂರ್ಣಿಮಾ, |
| 07-05-2015 | ಸಂಕಷ್ಟ ಚತುರ್ಥಿ ಚಂದ್ರೋದಯ ರಾತ್ರಿ-09.48ಕ್ಕೆ |
| 11-05-2015 | ಕೃತ್ತಿಕಾ ನಕ್ಷತ್ರಾರಂಭ |
| 14-05-2015 | ಸರ್ವೈಕಾದಶೀ |
| 15-05-2015 | ವೃಷಭ ಸಂಕ್ರಮಣ, ಪ್ರದೋಷಃ |

## ಚುಟುಕುಗಳು

**ನಡೆ**

ಅಂದು
ನಡೆ ಮುಂದೆ ನಡೆ ಮುಂದೆ
ನುಗ್ಗಿ ನಡೆ ಮುಂದೆ
ಇಂದು
ನಡೆ ಹಿಂದೆ ನಡೆ ಹಿಂದೆ
ತಗ್ಗಿ ನಡೆ ಹಿಂದೆ

**ಬೆಲೆ**

ಅಂದು ವಸ್ತುವಿನ ಬೆಲೆ
ಇಳಿದಿತ್ತು, ಕಾಲದ ಮಹಿಮೆ
ಇಂದು ಏರಿದೆ ಗಗನಕ್ಕೆ
ಅದು ನಮ್ಮ ಪಾಲಿನ ಗರಿಮೆ

**ಹಿರಿಯರು**

ಅಂದು ಬುದ್ಧಿಮಾತ ಹೇಳಲು
ಇದ್ದರು ಹಿರಿಯರು
ಇಂದು ಅವರ ಮಾತ
ಕೇಳುವುದೇ ಇಲ್ಲ ಕಿರಿಯರು

**ಹೆಣ್ಣು**

ಅಂದು ಕುಳಿತು ಮನೆ
ನಡೆಸುತ್ತಿದ್ದಳು ಹೆಣ್ಣು
ಇಂದು ಕಲಿತು ಗಳಿಸಿ ಮನೆಗೆ
ತರುವಳು ಕೈತುಂಬ ಹೊನ್ನು

**- ಕೃಷ್ಣ ಕುಮಾರ್ ರಾವ್, ಮಟ್ಟು.**

### ಮತ ನೀಡಿರಿ.

ಎದ್ದೇಳಿ! ಎದ್ದೇಳಿ!
ಓ ಬಂಧು ಬಾಂಧರೆ
ಮತದಾರ ಬಂಧುಗಳೆ
ರಾಷ್ಟ್ರದುನ್ನತಿಗೆ
ಕಾರಣರಾದವರೆ।
ನಿಮ್ಮ ಮತದಿಂದಲೇ
ಉನ್ನತಿಯು ಅವನತಿಯು
ಒಳಿತು ಕೆಡುಕಿಗೆ
ನೀವೇ ಕಾರಣರು।
ಮತ ಎಂಬ ಅಸ್ತ್ರದಲಿ
ದುಷ್ಟರನು ಓಡಿಸಿರಿ
ಮತ ಮಂತ್ರವನು ಜಪಿಸಿ
ರಾಷ್ಟ್ರವನು ಬಲಪಡಿಸಿ।
ಜಾತಿ, ಮತ ಕಡೆಗಣಿಸಿ
ಪಕ್ಷ ದೂರಕೆ ಸರಿಸಿ।
ಗುಣ ನೋಡಿ ಮತನೀಡಿ
ಆಮಿಷವ ನೂಡ್ಡುವ
ವ್ಯಕ್ತಿಗಳ ಕಡೆಗಣಿಸಿ।
ಯೋಗ್ಯತೆಯನರಿಯಿರಿ
ಮತವನ್ನು ನೀಡಿರಿ।

**ತುಳು ಭಜನೆ**

### ಗಣಪತಿ ಶ್ರೀ ಸುಬ್ರಹ್ಮಣ್ಯ

ಕಾಪುಲೆ ಎನನ್ । ಶ್ರೀ ಸುಬ್ರಹ್ಮಣ್ಯ ।
ಭಕ್ತರೆ ರಕ್ಷಕೆ । ಈ ಅಗ್ರಗಣ್ಯೆ ॥ಪ॥

ದುಷ್ಟೆರೆ ನಾಶಕೆ । ಶಿಷ್ಟೆರೆ ರಕ್ಷಕೆ।
ಇಷ್ಟೊನು ಕೊಳ್ಪಿನ । ಮಲ್ಲೆ ಸಂರಕ್ಷಕೆ ।
ತಾರಕ ನಾಶಕೆ । ಗೌರಿ ಕುಮಾರೆ ।
ಶೂರ ಪದ್ಮಾಸುರನ್ । ಗೆಲ್ತಿನ ಧೀರೆ ॥೧॥

ವಲ್ಲಿನ ಪತಿರಾಯೆ । ಸಂದ್ಕ ಕುಮಾರೆ ।
ಬಲ್ಲಿದೆ ಮಾಂತ । ಧರ್ಮ ಉದ್ಧಾರಕೆ।
ನವಿಲ್‌ಟ್ ಕುಳ್ಳಿನ । ಷಣ್ಮುಖ ರಾಯೆ ।
ಕಾರ್ತಿಕೇಯೆನೆ । ಕುಮಾರ ಸ್ವಾಮಿ ॥೨॥

ಭಕ್ತವತ್ಸಲನೆ । ಶರವಣ ಭವನೆ ।
ಮುಕುತಿನ್ ಕೊಳ್ಪಿನ । ಶಕ್ತಿ ಸ್ವರೂಪಿಯೆ।
ದೈತ್ಯ ವಿನಾಶಕೆ । ಪಾರ್ವತಿ ಪುತ್ರೆ ।
ನಿತ್ಯೊಲ ಭಕ್ತರೆ ಗಿಂಬುನು ಕೊಳ್ಪೆ ॥೩॥

**ರಚನೆ : ಕೆ. ಗೋಪಾಲರಾವ್, ಕಡಬ.**

## ಶ್ರೀಶಾರದಾ ದೇವಸ್ಥಾನ, ಶಾರದಾನಗರ, ಕುಂಜಿಬೆಟ್ಟು , ಉಡುಪಿ

### ಈ ತಿಂಗಳ ಕಾರ್ಯಕ್ರಮಗಳು

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)**

| | |
|---|---|
| ಮಂಗಳಾರತಿ | : ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30 ಗಂಟೆಗೆ |
| ಪ್ರತಿ ಸೋಮವಾರ | : **''ಸತ್ಸಂಗದವರಿಂದ ಭಜನೆ''** ಸಂಜೆ 6-00 ಗಂಟೆಯಿಂದ |
| ಪ್ರತಿ ಮಂಗಳವಾರ | : **''ಸೌಂದರ್ಯಲಹರಿ ಪಾರಾಯಣ''** ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ) |
| ಪ್ರತಿ ಶುಕ್ರವಾರ | : **ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ** ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ) |
| ಪ್ರತಿ ಆದಿತ್ಯವಾರ | : ಸ್ವಾಧ್ಯಾಯ ಸಮಿತಿಯವರಿಂದ **''ಪಾರಾಯಣ''** ಸಂಜೆ ಗಂಟೆ 4-30ರಿಂದ |

**ಸಂಕಷ್ಟಹರ ಚತುರ್ಥಿಯಂದು (ತಾ.07-05-2015) ''ಸಾಮೂಹಿಕ ಗಣಹೋಮ'' ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**

**ತಾ.23-04-2015 ಪಂಚಮಿಯಂದು ''ನಾಗದೇವರಿಗೆ ತನುಸೇವೆ'' ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ**

**ತಾ.11-04-2015 ಹಾಗೂ ತಾ.08-05-2015 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)**

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

## ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ ಪ್ರಬಂಧ ಮಂಡನೆ



ಮಣಿಪಾಲ ತಾಂತ್ರಿಕ ಮಹಾವಿದ್ಯಾಲಯದ ವಿದ್ಯುನ್ಮಾನ ಮತ್ತು ಸಂಪರ್ಕ ವಿಭಾಗದಲ್ಲಿ ಹಿರಿಯ ಸಹ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿರುವ ಶ್ರೀ ಸಂಪತ್ ಕುಮಾರ್ ಅವರು ದಿನಾಂಕ 30-03-2015 ರಂದು ಮಲೇಶಿಯಾದ ಪೆನಾಂಗ್ ನಲ್ಲಿ ಜರುಗಿದ ಅಂತಾರಾಷ್ಟ್ರೀಯ ಸಮ್ಮೇಳನ (International Conference on Biomedical Engineering -2015.) ದಲ್ಲಿ "ಎಕ್ಸ್ ಗ್ರೇ ಚಿತ್ರಗಳ 3-ಡಿ ರಚನೆಯ ಮೂಲಕ ಬೆನ್ನುಮೂಳೆಯ ನ್ಯೂನತೆಗಳ ಮಾಪನ" ಎಂಬ ವಿಷಯದ ಕುರಿತು ತಾಂತ್ರಿಕ ಪ್ರಬಂಧವನ್ನು ಮಂಡಿಸಿರುತ್ತಾರೆ. ಬೆನ್ನುಮೂಳೆಯ ರೋಗ ಹೊಂದಿರುವವರು ತಮ್ಮ ತಪಾಸಣೆಗೆ CT ಸ್ಕ್ಯಾನ್ ಅಥವಾ MRI ಅಂತಹ ದುಬಾರಿಯಾದ ಅಲ್ಲದೇ ಅಪಾಯಕಾರಿಯಾದ 3D ತಂತ್ರಜ್ಞಾನಕ್ಕೆ ಮೊರೆ ಹೋಗುವ ಬದಲು ಕಡಿಮೆ ವೆಚ್ಚದ ಸಾಧನವನ್ನು ಕಂಡುಹಿಡಿಯುವುದು ಈ ಸಂಶೋಧನೆಯ ಉದ್ದೇಶವಾಗಿರುತ್ತದೆ. ಈ ಅಧ್ಯಯನಕ್ಕೆ ಭಾರತ ಸರಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಸಂಶೋಧನಾ ಕೇಂದ್ರ (SERB ñ DST) ದಿಂದ 10.26 ಲಕ್ಷ ರೂಪಾಯಿಗಳ ಅನುದಾನವೂ ದೊರಕಿರುತ್ತದೆ. ಇವರು ಕುಂಭಾಸಿಯಲ್ಲಿ ನೆಲೆಸಿರುವ ಶ್ರೀಮತಿ ಕುಮುದ್ವತಿ ಹಾಗೂ ಶ್ರೀ ಇನ್ನ ಪದವು ರವೀಂದ್ರ ರಾವ್ ದಂಪತಿಗಳ ಸುಪುತ್ರರು. ಶ್ರೀ ಸಂಪತ್ ಕುಮಾರ್ ಇವರ ಸಾಧನೆಗೆ ಶ್ರೀಶಾರದಾ ಅಭಿನಂದನೆಗಳು.

## ಕರ್ಣಾಟಕ ಬ್ಯಾಂಕ್: ಮಹಾಪ್ರಬಂಧಕರಾಗಿ ಚಂದ್ರಶೇಖರ ರಾವ್



ಕರ್ಣಾಟಕ ಬ್ಯಾಂಕ್‌ನ ಉಪ ಮಹಾ ಪ್ರಬಂಧಕರಾಗಿದ್ದ ಚಂದ್ರಶೇಖರ ರಾವ್ ಬಿ. ಅವರು ಮಹಾಪ್ರಬಂಧಕರಾಗಿ ಪದೋನ್ನತಿಗೊಂಡಿದ್ದಾರೆ. ವಾಣಿಜ್ಯ ಶಾಸ್ತ್ರದಲ್ಲಿ ಪದವಿ ಹೊಂದಿರುವ ಚಂದ್ರಶೇಖರ ರಾವ್ ಬಿ. ಅವರು ಅಸೋಸಿಯೇಟ್ ಚಾರ್ಟರ್ಡ್ ಅಕೌಂಟೆಂಟ್ ಹಾಗೂ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಬ್ಯಾಂಕಿಂಗ್ ಆ್ಯಂಡ್ ಫೈನಾನ್ಸ್‌ನಲ್ಲಿ ಸರ್ಟಿಫೈಡ್ ಅಸೋಸಿಯೇಟ್ ಆಗಿದ್ದಾರೆ. ಮೂಲತಃ ಮೂಡಬಿದಿರೆಯ ಅಲಂಗಾರ್ ನಿವಾಸಿಯಾಗಿರುವ ಅವರು 1995ರಲ್ಲಿ ಬ್ಯಾಂಕ್ ಕ್ಷೇತ್ರದಲ್ಲಿ ಪ್ರಬಂಧಕರಾಗಿ ಸೇವೆ ಪ್ರಾರಂಭಿಸಿ, ಹಲವು ಶಾಖೆಗಳಲ್ಲಿ ವಿವಿಧ ಹುದ್ದೆಗಳಲ್ಲಿ ಸುಮಾರು 20 ವರ್ಷಗಳ ಕಾಲ ಕಾರ್ಯ ನಿರ್ವಹಿಸಿದ್ದಾರೆ. ಶ್ರೀಯುತ ಚಂದ್ರಶೇಖರ ರಾಯರ ಸಾಧನೆಗೆ ಶ್ರೀಶಾರದಾ ಅಭಿನಂದನೆಗಳು.

## ನಿಧನ

### ಮಹಾಲಕ್ಷ್ಮಿ ಅಮ್ಮ

ಕಡಬ ತಲೇಕಿ ದಿ. ರಘುವೀರಶರ್ಮರ ಧರ್ಮಪತ್ನಿ ಮಹಾಲಕ್ಷ್ಮಿ ಅಮ್ಮನವರು (78ವರ್ಷ) ದಿನಾಂಕ 16-03-2015ರಂದು ಮುಂಬೈಯಲ್ಲಿ ನಿಧನರಾದರು. ಮೃತರು ಮುಂಬೈಯಲ್ಲಿ ವಾಸ್ತವ್ಯದಲ್ಲಿರುವ ತಮ್ಮ ಪುತ್ರ ಭರತೇಶ್ ಶರ್ಮ ಸಹಿತ ಅಪಾರ ಬಂಧು ಬಾಂಧವರನ್ನು ಅಗಲಿದ್ದಾರೆ.

### ಯಶೋದ

ಕಡಬದ ಮಧುವನ ನಿವಾಸಿ ನಿವೃತ್ತ ಶಿಕ್ಷಕ, ಲೇಖಕ ದಿ. ಕೆ ಅನಂತರಾವ್ ಅವರ ಧರ್ಮಪತ್ನಿ ಯಶೋದ ಅವರು (72ವರ್ಷ) ದಿನಾಂಕ 18-03-2015ರಂದು ಮಂಗಳೂರಿನ ಖಾಸಗೀ ಆಸ್ಪತ್ರೆಯಲ್ಲಿ ನಿಧನರಾದರು. ಮೃತರು ಮಂಗಳೂರಿನ ಖ್ಯಾತ ಇಂಜಿನಿಯರ್ ಶ್ರೀ ಜ್ಞಾನೇಶ್‌ರಾವ್ ಸಹಿತ ಮೂವರು ಪುತ್ರರು, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧುಬಾಂಧವರನ್ನು ಅಗಲಿದ್ದಾರೆ.

## ಜ್ಞಾನಭಾರತಿ (ರಿ.), ಉಡುಪಿ ಮತ್ತು
## ಶ್ರೀ ಶಾರದಾ ದೇವಸ್ಥಾನ, ಕುಂಜಿಬೆಟ್ಟು, ಉಡುಪಿ

ಇವರ ಸಹಯೋಗದಲ್ಲಿ

### ಶ್ರೀ ಶಂಕರ ಜಯಂತಿ-2015ನ್ನು

**ಉಡುಪಿ ಕುಂಜಿಬೆಟ್ಟಿನ ಶ್ರೀಶಾರದಾ ದೇವಸ್ಥಾನ ಮತ್ತು ಶ್ರೀಶಾರದಾ ಮಂಟಪದಲ್ಲಿ ಆಯೋಜಿಸಲಾಗಿದೆ.**

**ಕಾರ್ಯಕ್ರಮಗಳು**

**ತಾ.22-04-2015ರಂದು** ಬೆಳಿಗ್ಗೆ 9-30ರಿಂದ ಸಂಜೆ 5-30ರ ವರೆಗೆ **ಶ್ರೀ ಸೌಂದರ್ಯಲಹರೀ ಅಖಂಡ ಪಾರಾಯಣ**

**ತಾ.23-04-2015ರಂದು** ಬೆಳಿಗ್ಗೆ 10-00ಕ್ಕೆ **ಸೌಂದರ್ಯಲಹರೀ ಪಾರಾಯಣದ ಸಮಾಪ್ತಿ,** ಗಂಟೆ 10-00ರಿಂದ 11-00ರ ವರೆಗೆ **ಶ್ರೀಶಂಕರ ವಿರಚಿತ ಸ್ತೋತ್ರ ಪಠಣ (ಮಹಿಳೆಯರಿಂದ),**

**ಸಭಾಕಾರ್ಯಕ್ರಮ** (ಗಂಟೆ 11-00ಕ್ಕೆ)

ಅಧ್ಯಕ್ಷತೆ : **ಶ್ರೀ ಪ್ರಫುಲ್ಲಚಂದ್ರ ರಾವ್,** ಅಧ್ಯಕ್ಷರು, ಶ್ರೀ ಜ್ಞಾನಭಾರತಿ (ರಿ.), ಉಡುಪಿ

ಉಪನ್ಯಾಸ : **ಶ್ರೀ ಆದರ್ಶ ಗೋಖಲೆ,** ಅಧ್ಯಾಪಕರು ಶ್ರೀ ಭುವನೇಂದ್ರ ಹೈಸ್ಕೂಲು, ಕಾರ್ಕಳ.

ಮಧ್ಯಾಹ್ನ 12-30ಕ್ಕೆ

**ಶ್ರೀಶಂಕರಾಚಾರ್ಯ ಅಷ್ಟೋತ್ತರ ಕಲ್ಪೋಕ್ತ ಪೂಜೆ-ಮಹಾಪೂಜೆ-ಪ್ರಸಾದ ವಿತರಣೆ**

*ಭಕ್ತ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ, ಸಹಕರಿಸಬೇಕೆಂದು ವಿನಂತಿಕೊಳ್ಳಲಾಗಿದೆ.*

**-ಕಾರ್ಯದರ್ಶಿ, ಜ್ಞಾನಭಾರತಿ (ರಿ.), ಉಡುಪಿ**

---

## ಶ್ರೀ ವಿಷ್ಣುಮೂರ್ತಿ ದೇವಸ್ಥಾನ, ಪಾದೆಬೆಟ್ಟು, ಪಡುಬಿದ್ರಿ

ಭಕ್ತಾಭಿಮಾನಿಗಳೇ,

**ಇದೇ ಬರುವ ದಿನಾಂಕ 02-05-2015ನೇ ಶನಿವಾರದಂದು**

ಶ್ರೀ ದೇವಳದಲ್ಲಿ

### ನರಸಿಂಹ ಜಯಂತಿ ಮಹೋತ್ಸವವು

**ಶ್ರೀ ಕ್ಷೇತ್ರದ ತಂತ್ರಿಗಳಾದ ಬ್ರಹ್ಮಶ್ರೀ ಪಾವಂಜೆ ವಾಗೀಶ ಶಾಸ್ತ್ರಿಗಳ ನೇತೃತ್ವದಲ್ಲಿ** ಬೆಳಗ್ಗೆ ಕಲಶಾಭಿಷೇಕ, ಮಧ್ಯಾಹ್ನ ಮಹಾಪೂಜೆ ಹಾಗೂ ಸಂಜೆ ಶ್ರೀ ದೇವರಿಗೆ ರಂಗಪೂಜೆಯೊಂದಿಗೆ ನೆರವೇರಲಿರುವುದು.

ಭಕ್ತಾಭಿಮಾನಿಗಳೆಲ್ಲಾ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಶ್ರೀದೇವರ ಸಿರಿಮುಡಿ ಗಂಧಪ್ರಸಾದವನ್ನು ಸ್ವೀಕರಿಸಿ, ಕೃತಾರ್ಥರಾಗಬೇಕಾಗಿ ವಿನಂತಿ. ಅಂದು ಮಧ್ಯಾಹ್ನ ಹಾಗೂ ರಾತ್ರಿ ಭೋಜನ ಪ್ರಸಾದ ನಡೆಯಲಿರುವುದು.

**-ಆಡಳಿತ ಮಂಡಳಿ, ಶ್ರೀ ವಿಷ್ಣುಮೂರ್ತಿ ದೇವಸ್ಥಾನ, ಪಾದೆಬೆಟ್ಟು**

---




## RAJESH POWER PRESS

**PRINTERS & PUBLISHERS**

DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com

**QUALITY FIRST AND ALWAYS**

---



ತಂತ್ರಾಡಿ ವಿಶ್ವನಾಥ ಶಾನುಭೋಗ್

☎ 94487 24161
97417 85551



## ಹರಿಕೃಷ್ಣ ಡಿಜಿಟಲ್ಸ್



ಶುಭ ಸಮಾರಂಭಗಳ ಛಾಯಾಚಿತ್ರಣ ಹಾಗೂ ವೀಡಿಯೊ ಚಿತ್ರಣಕ್ಕಾಗಿ ಸಂಪರ್ಕಿಸಿ


**"ಶ್ರೀರಂಗ", ವಿ. ಪಿ. ನಗರ, 3ನೇ ಮುಖ್ಯ ರಸ್ತೆ, ಕುಂಜಿಬೆಟ್ಟು, ಉಡುಪಿ - 576 102**

ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು

---


*Krishna Rao*

Ph : 2520652
Mob. : 9902029048



## KISHAN

**Studio & Video**



**Indoor Photography & Port Folio Photography,
Video & Mixing, Lamination**

MAIN ROAD, MAJOOR & BANTAKAL.

---

## ಶ್ರೀ ಮಾತಾ ಜ್ಯೋತಿಷ್ಯಾಲಯ

ಶ್ರೀ ಸುಬ್ರಹ್ಮಣ್ಯ ಕ್ಷೇತ್ರ, ಚೌಳಿಕೆರೆ, ಬಾರ್ಕೂರು.

ಬಾರ್ಕೂರು ಸಂಸ್ಥಾನದ ಪಾರಂಪರ್ಯ ನಾಗಬ್ರಹ್ಮ ಹಾಗೂ ದುರ್ಗೆಯ ದರ್ಶನ ಪಾತ್ರಿಗಳು, ಜೋತಿಷ್ಯರು ಮತ್ತು ಪುರೋಹಿತರು ಅಷ್ಟ ಮಂಗಲ ಪ್ರಶ್ನೆ, ಆರೂಢರಾಶಿ ಪ್ರಶ್ನೆ, ಜಾತಕ, ನಾಗದರ್ಶನ ಮತ್ತು ಸರ್ಪಸಂಸ್ಕಾರ, ಆಶ್ಲೇಷಬಲಿ, ಪ್ರತಿಷ್ಠೆ, ಶಾಂತಿ ಹಾಗೂ ಶುಭ ಕರ್ಮಗಳಿಗೆ ಅಗತ್ಯವಿದ್ದಲ್ಲಿ ವಿಚಾರಿಸಿ.

**ಶ್ರೀ ರಾಘವೇಂದ್ರ ಭಟ್ (ಫೋನ್ : 9632302234.)**

---

## ಶ್ರೀ ವೈಷ್ಣವಿ ಜ್ಯೋತಿಷ್ಯಾಲಯ

ನಮ್ಮಲ್ಲಿ ಜಾತಕಗಳನ್ನು ಮಾಡಿ ಕೊಡಲಾಗುವುದು.
ಹಾಗೂ ತತ್ಸಂಬಂಧ ಶಾಂತಿ ಹೋಮಾದಿಗಳನ್ನು ಮತ್ತು ಶುಭ ಕಾರ್ಯಕ್ರಮಗಳನ್ನು ನಮ್ಮಲ್ಲಿಯೇ ವ್ಯವಸ್ಥಿತವಾಗಿ ಮಾಡಿಕೊಡಲಾಗುವುದು.


**ವೇದಮೂರ್ತಿ ಚಿದಾನಂದ ಭಟ್**

| | |
|---|---|
| #1437, 5ನೇ ಮುಖ್ಯ ರಸ್ತೆ, 2ನೇ "ಡಿ" ಬ್ಲಾಕ್, 2ನೇ ಸ್ಟೇಜ್, ರಾಜಾಜಿನಗರ, ಬೆಂಗಳೂರು–560010 | ಶ್ರೀ ಅಗಸ್ತ್ಯೇಶ್ವರ ದೇವಸ್ಥಾವದ ಬಳಿ, ಕಿರಿಮಂಜೇಶ್ವರ, ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ |

**ಮೊಬೈಲ್– 9886629697, 9986119865**

---

ಪ್ರೊ : ಸುಧಾಕರ್ ರಾವ್ ಬೆಳ್ಳೆ



## ಶ್ರೀಮಾತಾ ಇಲೆಕ್ಟ್ರಾನಿಕ್ಸ್

ಎಲ್ಲಾ ರೀತಿಯ ಗೃಹೋಪಯೋಗಿ ವಸ್ತುಗಳಿಗಾಗಿ
ಭೇಟಿ ನೀಡಿ....

ಪ್ರೀತಿ ಕಾಂಪ್ಲೆಕ್ಸ್, ಬೆಳ್ಮಣ್ಣು, ಉಡುಪಿ. ಫೋನ್ : 08258-274103
ಚೈತ್ರ ಕಾಂಪ್ಲೆಕ್ಸ್, ಪಡುಬಿದ್ರಿ ಗ್ರಾಮಪಂಚಾಯತ್‌ನ ಎದುರು. ಫೋನ್ : 0820-2599093

---

## ದೇವಿಕೃಪಾ ಏಜೆನ್ಸೀಸ್, ನಂದಿಕೂರು

ಫೋನ್ : 2556536 (R), 2555466 (O), Mobile : 9845149521



**ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.**

**ಪ್ರೊ। ಎಸ್. ಜನಾರ್ದನ್ ರಾವ್**
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು

---



**ಎಮ್. ದೇವಾನಂದ್ ಭಟ್**

Cell : 9845644556
9483913344

## ಶೋಭಾ ಡಿಜಿಟಲ್



ಸ್ಟುಡಿಯೋ & ವೀಡಿಯೊ

**ಬೆಳ್ವಾಯಿ-574213** (08258)-276177 (O)
**ಮೂಡಬಿದ್ರಿ, ಲಾವಂತ ಕಾಂಪ್ಲೆಕ್ಸ್** 9901995655
**ಎಡಪದವು - 574 164** (0824)-2256374 (O) **ಮಂಗಳೂರು, ದ.ಕ.**

ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು

Owned & Published by : Sri Sthanika Dravida Brahmana Sangha (R.), Shri Sharada Mantapa, Sharada Nagara, Kunjibettu, Udupi - 576 102. Ph : 0820-2520754
Edited by Krishnakumar Rao Mattu, Designed @ SriNidhi Computer Graphics, Rajataadri, Manipal, Printed at Agrahara Offsets, Udupi. E-mail : srisharadaudupi@yahoo.co.in Website : www.srisharada.org